# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ನವೆಂಬರ್ 14, 2021

ಸಂಪುಟ : 48 ಸಂಚಿಕೆ : 183 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




## ಸೆಲ್ಫಿ ವಿತ್ ಮನೋರಂಜನ್

ಇದೇ ದಿನಾಂಕ 19 ರಂದು ಬಿಡುಗಡೆಯಾಗಲಿರುವ 'ಮುಗಿಲ್ ಪೇಟೆ' ಚಿತ್ರದ ಪ್ರಚಾರಕ್ಕಾಗಿ ಶನಿವಾರ ದಾವಣಗೆರೆಗೆ ಆಗಮಿಸಿದ್ದ ಕ್ರೇಜಿ ಸ್ಟಾರ್ ರವಿಚಂದ್ರನ್ ಪುತ್ರ ಮನೋರಂಜನ್ ಅವರು ದವನ್ ನೂತನ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಒತ್ತಾಸೆ ಮೇರೆಗೆ ಸೆಲ್ಫಿಗೆ ಫೋಸ್ ನೀಡುತ್ತಿರುವುದು.

# ಬಿಟ್ ಹಗರಣ: ಎಸ್‌ಐಟಿಗೆ ವಹಿಸಿ

## ಬಿಜೆಪಿಯಿಂದ ಹಗರಣ ಮುಚ್ಚಿ ಹಾಕಲು ಯತ್ನ: ಸುರ್ಜೇವಾಲಾ

ನವದೆಹಲಿ, ನ. 13 – ಬಹುಕೋಟಿ ಬಿಟ್ ಕಾಯಿನ್ ಹಗರಣವನ್ನು ಮುಚ್ಚಿ ಹಾಕಲು ಕರ್ನಾಟಕದ ಬಿಜೆಪಿ ಸರ್ಕಾರ ಯತ್ನಿಸುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಈ ಬಗ್ಗೆ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲಾ, ಈ ಹಗರಣ ನಡೆದಾಗ ಬಸವರಾಜ ಬೊಮ್ಮಾಯಿ ಅವರು ಗೃಹ ಸಚಿವರಾಗಿದ್ದರು. ಈಗ ಮುಖ್ಯ ಮಂತ್ರಿಯಾಗಿರುವ ಬೊಮ್ಮಾಯಿ ಹಗರಣದಲ್ಲಿ ಯಾವ ಪಾತ್ರ ವಹಿಸಿದ್ದಾರೆ? ಎಂದು ಪ್ರಶ್ನಿಸಿದ್ದಾರೆ.

ಬೊಮ್ಮಾಯಿ ಗೃಹ ಸಚಿವರಾಗಿದ್ದ ಸಂದರ್ಭದಲ್ಲೇ ಹಗರಣ ಬೆಳಕಿಗೆ ಬಂದಿತ್ತು. ಈ ಪ್ರಕರಣ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮ ಬೀರುವಂತಿತ್ತು. ಇಷ್ಟಾದರೂ ಜಾರಿ



ನಿರ್ದೇಶನಾಲಯದಂತಹ ಸಂಸ್ಥೆಗಳಿಗೆ ಮಾಹಿತಿ ನೀಡಿರಲಿಲ್ಲ. ಇದಕ್ಕಾಗಿ ಬೊಮ್ಮಾಯಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸುರ್ಜೇವಾಲಾ ಆಗ್ರಹಿಸಿದ್ದಾರೆ.

ಇಂಟರ್‌ಪೋಲ್ ಸೇರಿದಂತೆ ಹಲವಾರು ಅಂತರರಾಷ್ಟ್ರೀಯ ಸಂಸ್ಥೆಗಳು ಏಕೆ ಈ ಹಗರಣದ ತನಿಖೆ ನಡೆಸುತ್ತಿವೆ? ಈ ಸಂಸ್ಥೆಗಳಿಗೆ ಬಿಟ್ ಕಾಯಿನ್‌ಗಳು ಕಳ್ಳತನವಾದ ಬಗ್ಗೆ ತಿಳಿಸಿಲ್ಲವೇ? ಎಂದೂ ಅವರು ಪ್ರಶ್ನಿಸಿದ್ದಾರೆ.

ಭಾರತದ ಅತಿ ದೊಡ್ಡ ಬಿಟ್ ಕಾಯಿನ್ ಹಗರಣ ಕರ್ನಾಟಕದಲ್ಲಿ ಪತ್ತೆಯಾಗಿದೆ. ನ್ಯಾಯೋಚಿತ ತನಿಖೆ ನಡೆಸುವ ಬದಲು ರಾಜ್ಯ ಬಿಜೆಪಿ ಸರ್ಕಾರ ಹಗರಣವನ್ನು ಮುಚ್ಚಿ ಹಾಕುವ ಪ್ರಯತ್ನದಲ್ಲಿ ತೊಡಗಿದೆ ಎಂದವರು ಆರೋಪಿಸಿದ್ದಾರೆ.

ಇದು ಅಕ್ರಮ ಹಣದ ಪ್ರಕರಣವಷ್ಟೇ ಅಲ್ಲದೇ, ಅಂತರರಾಷ್ಟ್ರೀಯ ಅಪರಾಧವೂ ಆಗಿದೆ. ಆದರೆ, ತನಿಖೆ ಅಸಮರ್ಪಕವಾಗಿದೆ. ಜಾರಿ ನಿರ್ದೇಶನಾಲಯ ಇಲ್ಲವೇ ಕರ್ನಾಟಕ ಪೊಲೀಸರು ಸಮರ್ಪಕ ತನಿಖೆ ಮಾಡಿಲ್ಲ. ಹೀಗಾಗಿ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿನ ವಿಶೇಷ ತನಿಖಾ ತಂಡದ ಮೂಲಕ ಪ್ರಕರಣದ ತನಿಖೆ ನಡೆಸಿ ಸತ್ಯ ಬಯಲಿಗೆ ತರಬೇಕು ಎಂದು ಕಾಂಗ್ರೆಸ್ ನಾಯಕರು ಒತ್ತಾಯಿಸಿದ್ದಾರೆ.

ಈ ಪ್ರಕರಣದ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಏಕೆ ಮೌನವಾಗಿದ್ದಾರೆ? ಎಂದು ಪ್ರಶ್ನಿಸಿರುವ ಸುರ್ಜೇವಾಲಾ, ಪ್ರಧಾನ ಮಂತ್ರಿ ಇತ್ತೀಚೆಗೆ ಅಮೆರಿಕಗೆ ಭೇಟಿ (2ನೇ ಪುಟಕ್ಕೆ)

# ಸವಾಲಿಗೆ ಸಿದ್ಧ, ಮಾತಿಗೂ ಬದ್ಧ

## ಮಾಜಿ ಶಾಸಕ ರಾಜೇಶ್ ಮಾತಿಗೆ ಶಾಸಕ ರಾಮಚಂದ್ರ ಪ್ರತಿಕ್ರಿಯೆ

ಜಗಳೂರು, ನ.13- ಮಾಜಿ ಶಾಸಕ ಎಚ್.ಪಿ. ರಾಜೇಶ್ ಅವರು ನೀಡಿರುವ ಆಹ್ವಾನದಂತೆ ಸಮಗ್ರ ದಾಖಲೆಗಳೊಂದಿಗೆ ತರಳಬಾಳು ಶ್ರೀಗಳ ಜನತಾ ನ್ಯಾಯಾಲಯದಲ್ಲಿ ಚರ್ಚೆಗೆ ಸಿದ್ಧ ಎಂದು ಶಾಸಕ ಎಸ್. ವಿ. ರಾಮಚಂದ್ರ ತಿಳಿಸಿದರು.

ವಾಲ್ಮೀಕಿ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ನನ್ನ ಅಧಿಕಾರವಧಿಯ ಮೂರೂವರೆ ವರ್ಷಗಳಲ್ಲಿ ಮಾಡಿರುವ ಸಮಗ್ರ ದಾಖಲೆಗಳೊಂದಿಗೆ ಚರ್ಚೆಗೆ ಸಿದ್ಧನಿದ್ದೇನೆ. ಅವರು ತಮ್ಮ ಅಧಿಕಾರವಧಿಯಲ್ಲಿ ಹೇಳಿದಂತೆ 3,300 ಕೋಟಿ ರೂ. ದಾಖಲೆಗಳನ್ನು ತರಲಿ. ನಾನು ಮೂರು ಜನ ವಕೀಲರನ್ನು ನೇಮಿಸಿದ್ದೇನೆ. ಅವರೂ ವಕೀಲರನ್ನು ನೇಮಿಸಲಿ. ದಾಖಲೆಗಳೊಂದಿಗೆ ತರಳಬಾಳು ಶ್ರೀಗಳ ಜನತಾ ನ್ಯಾಯಾಲಯದಲ್ಲಿ ಶ್ರೀಗಳ ಸಮಕ್ಷಮ ಚರ್ಚೆಯಾಗಲಿ. ಅವರ ತೀರ್ಮಾನಕ್ಕೆ ನಾನು ತಲೆಬಾಗುತ್ತೇನೆ ಎಂದು ತಿಳಿಸಿದರು.

ತಮ್ಮ ಮೂರೂವರೆ ವರ್ಷದ ಅಧಿಕಾರವಧಿಯಲ್ಲಿ ಕೈಗೊಂಡಿರುವ 2,471 ಕೋಟಿ ರೂಪಾಯಿಗಳ ಕಾಮಗಾರಿಗಳ ಸಮಗ್ರ ದಾಖಲೆಗಳನ್ನು ಪ್ರದರ್ಶಿಸಿದ ಶಾಸಕರು, ಈ ದಾಖಲೆಗಳನ್ನು ಯಾರು ಬೇಕಾದರೂ ಇಲಾಖೆಯಲ್ಲಿ ಪರಿಶೀಲಿಸಿಕೊಳ್ಳಬಹುದು. ಪತ್ರಕರ್ತರು ದಾಖಲೆಗಳನ್ನು ಪರಿಶೀಲಿಸಿ ವರದಿ ಮಾಡಬಹುದು ಎಂದು ಶಾಸಕರು ತಿಳಿಸಿದರು.

ತರಳಬಾಳು ಶ್ರೀಗಳ ಆಶೀರ್ವಾದದಿಂದ ಮಂಜೂರಾಗಿರುವ 660 ಕೋಟಿ ರೂಪಾಯಿಗಳ 57

### ಹಾಲಿ-ಮಾಜಿ ಶಾಸಕರ 'ಸವಾಲು-ಪ್ರತಿ ಸವಾಲು' ತರಳಬಾಳು ಶ್ರೀಗಳ ಜನತಾ ನ್ಯಾಯಾಲಯಕ್ಕೆ

ಕೆರೆ ತುಂಬಿಸುವ ಯೋಜನೆಯಲ್ಲಿ ನನ್ನ ಪಾತ್ರ ಏನು ಎಂಬುದು ಶ್ರೀಗಳಿಗೆ ತಿಳಿದಿದೆ. ಇದನ್ನು ನಾನು ಮಾಡಿಸಿದೆ ಎಂದು ಎಲ್ಲೂ ಹೇಳಿಲ್ಲ. ಶ್ರೀಗಳ ಮಾರ್ಗದರ್ಶನದಂತೆ ನಾನು ಕಾರ್ಯನಿರ್ವಹಿಸಿದ್ದೇನೆ. ಭದ್ರಾ ಮೇಲ್ದಂಡೆ ಯೋಜನೆಗಾಗಿ 1,200 ಕೋಟಿ ರೂ. ಮಂಜೂರಾಗಿದೆ. ಟೆಂಡರ್ ಸಹ ಕರೆಯಲಾಗಿದೆ. ಇದು ನನ್ನ ಕನಸಿನ ಯೋಜನೆ. ನಾನು ಪಕ್ಷ ತೊರೆದದ್ದು ನಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ, ಸಮಗ್ರ ನೀರಾವರಿಗಾಗಿ. ಭದ್ರಾ ಮೇಲ್ದಂಡೆ ಯೋಜನೆ ಮಂಜೂರಾತಿಗಾಗಿ ಷರತ್ತು ವಿಧಿಸಿ ಯೋಜನೆಯನ್ನು ಪಡೆದುಕೊಂಡಿದ್ದೇನೆ. ಎಷ್ಟೇ ಕಷ್ಟ ಆದರೂ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಳಿಸುತ್ತೇವೆ ಎಂದು ಶಾಸಕರು ಭಾವುಕರಾಗಿ ನುಡಿದರು.

270 ಕೋಟಿ ರೂ.ಗಳ ಜಲ ಜೀವನ್, ಪಟ್ಟಣದಲ್ಲಿ ಅತ್ಯಾಧುನಿಕ ಮೂರು ಕೋಟಿ ರೂ. ವೆಚ್ಚದ ವಾಲ್ಮೀಕಿ ಭವನ, ಆಧುನಿಕ ಮಾದರಿಯ ಬಯಲು ರಂಗಮಂದಿರ ಸೇರಿದಂತೆ ನೂರಾರು ಕೋಟಿ (2ನೇ ಪುಟಕ್ಕೆ)



# ಹರಿಹರ ತಾ. ಆಸ್ಪತ್ರೆಗಳಿಗೆ ಕೇಂದ್ರ ಆರೋಗ್ಯ ಇಲಾಖೆ ತಂಡ ಭೇಟಿ



ಹರಿಹರ ನಗರದ ಹೊರವಲಯದ ಗುತ್ತೂರು ಅಂಗನವಾಡಿ ಕೇಂದ್ರಗಳಿಗೆ ಕೇಂದ್ರ ಆರೋಗ್ಯ ಇಲಾಖೆಯ ಸಮಾನ ಪರಿಶೀಲನಾ ಅಭಿಯಾನ ತಂಡವು ಭೇಟಿ ಮಾಡಿ ಸಾರ್ವಜನಿಕರಿಂದ ಮಾಹಿತಿ ಸಂಗ್ರಹಿಸಿತು.

ಹರಿಹರ, ನ.13- ಕೇಂದ್ರ ಆರೋಗ್ಯ ಇಲಾಖೆಯ ಸಮಾನ ಪರಿಶೀಲನಾ ಅಭಿಯಾನ ತಂಡವು ತಾಲ್ಲೂಕಿನ ವಿವಿಧ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಪರಿಶೀಲನೆ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ತಂಡದ ಮುಖ್ಯಸ್ಥ ಡಾ.ಹಿಮಾನಿಷಾ ಭೂಷಣ್, ರಾಷ್ಟ್ರೀಯ ಹೆಲ್ತ್ ಮಿಷನ್ ಅಡಿಯಲ್ಲಿ ದೇಶದ ಹಲವಾರು ನಗರದಲ್ಲಿನ ಆಸ್ಪತ್ರೆಯ ಆಡಳಿತದ ಬಗ್ಗೆ ಮಾಹಿತಿ ಸಂಗ್ರಹಿಸಿ, ಪ್ರಸ್ತುತ ಇರುವ ಆರೋಗ್ಯ ಸೇವಾ ವ್ಯವಸ್ಥೆಯನ್ನು ಸುಧಾರಿಸಲು ಜನರಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿದಾಗ ಮಕ್ಕಳಲ್ಲಿ ಅಪೌಷ್ಠಿಕತೆ ಹೆಚ್ಚಾಗಿರುವುದು ಕಂಡು ಬಂದಿದೆ. ಅದರ ಸುಧಾರಣೆಗೆ ಸೂಚಿಸಲಾಗಿದೆ. ದಾವಣಗೆರೆ ಜಿಲ್ಲೆಯ ಕೆಲವು ಆಸ್ಪತ್ರೆಗಳಲ್ಲಿ ಉಚಿತವಾಗಿ ಕಿಡ್ನಿ ಕಸಿ ಚಿಕಿತ್ಸೆ ನೀಡಲಾಗುತ್ತದೆ. ಅದರ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಹಾಗೂ ನಿರ್ವಹಣೆಗಾಗಿ ವೈದ್ಯರ ಕೊರತೆ ನಿವಾರಿಸಲು ಸೂಚಿಸುವುದಾಗಿ ಹೇಳಿದರು.

ಹರಿಹರ ನಗರದ ಸಾರ್ವಜನಿಕ ಆಸ್ಪತ್ರೆ, ಗುತ್ತೂರು ಅಂಗನವಾಡಿ ಕೇಂದ್ರ, ಕೊಂಡಜ್ಜಿ ಆಸ್ಪತ್ರೆ, ಬೆಳ್ಳೂಡಿ ಅಂಗನವಾಡಿ ಕೇಂದ್ರ ಮತ್ತು (2ನೇ ಪುಟಕ್ಕೆ)

### ಹರಿಹರ ಆಸ್ಪತ್ರೆ ಬಗ್ಗೆ ಪ್ರಶಂಸೆ

**ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ಜನರಿಗೆ ಸೇವೆ ಸಿಗುತ್ತಿದೆ ಎಂದು ಕೇಂದ್ರ ಸಮಾನ ಪರಿಶೀಲನೆ ತಂಡದಿಂದ ಪ್ರಶಂಸೆ ವ್ಯಕ್ತಪಡಿಸಿದೆ. ಕೇಂದ್ರ ಮತ್ತು ರಾಜ್ಯದಿಂದ ಬರುವ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಮುಟ್ಟಿಸುವಲ್ಲಿ ಇಲ್ಲಿನ ಆಸ್ಪತ್ರೆಯ ಆಡಳಿತ ಮಂಡಳಿ ಮತ್ತು ವೈದ್ಯರು ಮತ್ತು ಸಿಬ್ಬಂದಿಗಳು ಉತ್ತಮ ಕೆಲಸ ಮಾಡಿದ್ದಾರೆ ಎಂದು ತಂಡದ ಮುಖ್ಯಸ್ಥರು ಹೇಳಿದರು.**

# ಮದುವೆ ಊಟ ಸೇವಿಸಿ ನೂರಾರು ಜನ ಅಸ್ವಸ್ಥ

## ಹಳೆದೇವರ ಹೊನ್ನಾಳಿಯಲ್ಲಿ ನಡೆದ ಘಟನೆ

ಹೊನ್ನಾಳಿ, ನ.13- ಮದುವೆ ಊಟ ಸೇವಿಸಿದ ಬಳಿಕ ವಾಂತಿ-ಭೇದಿಯಿಂದ ಬಳಲಿದ ನೂರಾರು ಜನರು ಆಸ್ಪತ್ರೆಗೆ ದಾಖಲಾಗಿರುವ ಘಟನೆ ಶನಿವಾರ ಹಳೆದೇವರ ಹೊನ್ನಾಳಿ ಗ್ರಾಮದಲ್ಲಿ ನಡೆದಿದೆ.

ಶುಕ್ರವಾರ ನಡೆದ ಮದುವೆ ಸಮಾರಂಭದಲ್ಲಿ ಮಧ್ಯಾಹ್ನದ ಊಟ ಸೇವಿಸಿದ ಐದು ನೂರಕ್ಕೂ ಅಧಿಕ ಜನರ ಪೈಕಿ 100ಕ್ಕೂ ಹೆಚ್ಚಿನ ಜನರಿಗೆ ಅಂದೇ ಮಧ್ಯರಾತ್ರಿಯಿಂದ ವಾಂತಿ-ಭೇದಿ ಪ್ರಾರಂಭವಾಗಿದೆ. ಇನ್ನಷ್ಟು ಜನರು ಅಸ್ವಸ್ಥಗೊಂಡಿರುವ ವಿಷಯ ತಿಳಿದ ಕೂಡಲೇ ಶನಿವಾರ ಬೆಳಿಗ್ಗೆ ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಯಿಂದ ಆಂಬ್ಯುಲೆನ್ಸ್ ವಾಹನಗಳು ಹಳೆದೇವರ ಹೊನ್ನಾಳಿ ಗ್ರಾಮಕ್ಕೆ ತೆರಳಿ ಅಸ್ವಸ್ಥರನ್ನು ಆಸ್ಪತ್ರೆಗೆ ಕರೆತಂದಿವೆ.



ಎಲ್ಲರೂ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯೆ ಡಾ. ಕೆ. ವಿದ್ಯಾ ಮಾಹಿತಿ ನೀಡಿ ವಿಷಪೂರಿತ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ಏರುಪೇರಾಗಿದೆ ಎಂದರು.

ಹೊನ್ನಾಳಿ ತಾಲ್ಲೂಕಿನ ಹೊಸದೇವರ ಹೊನ್ನಾಳಿ ಗ್ರಾಮದ ಚಂದ್ರಪ್ಪ-ಸರೋಜಮ್ಮ ಪುತ್ರ ರಾಕೇಶ್ ಮತ್ತು ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಗ್ರಾಮದ ವಿಜಯ ಅವರ ಮದುವೆ ಹೊನ್ನಾಳಿ ತಾಲ್ಲೂಕಿನ ಹಳೆದೇವರ ಹೊನ್ನಾಳಿ ಗ್ರಾಮದಲ್ಲಿ ಶುಕ್ರವಾರ ನಡೆಯಿತು. ಮದುವೆಗೆ ಐದು (2ನೇ ಪುಟಕ್ಕೆ)

# ರಾಜೀವ್ ಗಾಂಧಿ ವಿವಿಯ ಸೆನೆಟ್ ಸದಸ್ಯರಾಗಿ ಡಾ. ರವೀಂದ್ರ ಬಣಕಾರ್



ದಾವಣಗೆರೆ,ನ.13- ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ (ಬೆಂಗಳೂರು) ದ ಸೆನೆಟ್ ಸದಸ್ಯರಾಗಿ ನಗರದ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಕಣ್ಣಿನ ವಿಭಾಗದ ಮುಖ್ಯಸ್ಥರೂ, ಹಿರಿಯ ನೇತ್ರ ತಜ್ಞರೂ ಆಗಿರುವ ಡಾ. ರವೀಂದ್ರ ಬಣಕಾರ್ ಆಯ್ಕೆಯಾಗಿದ್ದಾರೆ.

ಮೊನ್ನೆ ನಡೆದ ಚುನಾವಣೆಯಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ರಾಜ್ಯದ ಆರೋಗ್ಯ ಮತ್ತು ಶಿಕ್ಷಣ (2ನೇ ಪುಟಕ್ಕೆ)

# ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರಾಗಿ ಎಂ.ಎಸ್. ವಿಠಲ್ ಆಯ್ಕೆ



ದಾವಣಗೆರೆ,ನ.13- ನಗರದ ನಾಮದೇವ ಸಿಂಪಿ ಸಮಾಜದ ದೈವ ಮಂಡಳಿ ಅಧ್ಯಕ್ಷರಾಗಿ ಮಹಾನಗರ ಪಾಲಿಕೆ ಮಾಜಿ ಮಹಾಪೌರರೂ, ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಮಾಲೀಕರೂ ಆದ ಎಂ.ಎಸ್. ವಿಠಲ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ನಾಮದೇವ ಸಿಂಪಿ ಸಮಾಜದ ದೈವ ಮಂಡಳಿಯ ಹಾಲಿ ಅಧ್ಯಕ್ಷ ಜಗನ್ನಾಥ ಎಸ್. ಗಂಜೀಗಟ್ಟಿ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ದೊಡ್ಡಪೇಟೆಯಲ್ಲಿರುವ ಶ್ರೀ ನಾಮದೇವ ಭಜನಾ (2ನೇ ಪುಟಕ್ಕೆ)

# ಕಮ್ಮವಾರಿ ಸಮಾಜಕ್ಕೆ ರಾಜಕೀಯ ಜನ್ಮ ನೀಡಿದ್ದು ಜಗಳೂರು



### ಚಿತ್ರದುರ್ಗ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ

ಜಗಳೂರು, ನ.13- ಕಮ್ಮವಾರಿ ಸಮಾಜಕ್ಕೆ ರಾಜಕೀಯ ಜನ್ಮ ನೀಡಿದ ಜಗಳೂರು ಕ್ಷೇತ್ರದ ಜನತೆಯ ಋಣವನ್ನು ಎಂದಿಗೂ ಮರೆಯುವಂತಿಲ್ಲ ಎಂದು ಕಮ್ಮವಾರಿ ಸಮಾಜದ ಹಿರಿಯ ಮುಖಂಡರು, ಚಿತ್ರದುರ್ಗ ಕ್ಷೇತ್ರದ ಶಾಸಕರೂ ಆದ ಜಿ. ಎಚ್. ತಿಪ್ಪಾರೆಡ್ಡಿ ಹೇಳಿದರು.

ಪಟ್ಟಣದ ತರಳಬಾಳು ಕೇಂದ್ರದಲ್ಲಿ ಆಯೋಜಿಸಿದ್ದ ತಾಲ್ಲೂಕು ಕಮ್ಮವಾರಿ ಕ್ಷೇಮಾಭಿವೃದ್ಧಿ ಸಂಘ ಹಾಗು ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇರುವ ಕಮ್ಮವಾರಿ ರೆಡ್ಡಿ ಸಮಾಜದ ಅಶ್ವತ್ಥ ರೆಡ್ಡಿ ಅವರು ಆರು ಬಾರಿ ಶಾಸಕರಾಗಿ ಜಗಳೂರಿನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಅವರ ಸಾಧನೆಗೆ ಎಲ್ಲ ಸಮಾಜಗಳ ಸಹಕಾರವೇ ಮುಖ್ಯ ಕಾರಣ ಎಂದರು.

ಜಾತ್ಯತೀತ ಮನೋಭಾವವನ್ನು ನಾನೂ ಸಹ ಪಾಲನೆ ಮಾಡಿದ್ದಕ್ಕೆ ಚಿತ್ರದುರ್ಗದಲ್ಲಿ ಮೂರು ಸಾವಿರ ಮತಗಳ ನಮ್ಮ ಸಮಾಜಕ್ಕೆ ಮೂರು ಲಕ್ಷ ಜನ ನನ್ನನ್ನು ನಾಲ್ಕು ಬಾರಿ ಶಾಸಕನನ್ನಾಗಿ ಮಾಡಿದ್ದಾರೆ. ಕಮ್ಮವಾರಿ ಸಮಾಜ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಮುಂದುವರೆಯಬೇಕಿದೆ. ಸರ್ಕಾರದ ನೆರವು ಪಡೆಯದೇ ಸಂಘದ ವತಿಯಿಂದ ಹಲವು ಸಮಾಜಮುಖಿ ಕಾರ್ಯಗಳನ್ನು ಮುಂದುವರೆಸಿ ಸರ್ವ ಜನಾಂಗದೊಂದಿಗೆ ಸಮಾನತೆ ಬದುಕು ಸಾಗಿಸಲು ನಾವೆಲ್ಲರೂ ಒಗ್ಗಟ್ಟಾಗಬೇಕು ಎಂದರು.

ನಿವೃತ್ತ ಪ್ರಾಚಾರ್ಯ ಜೆ. ಯಾದವ ರೆಡ್ಡಿ ಮಾತನಾಡಿ, ಸಮಾಜದ ಶಕ್ತಿ ಕೇಂದ್ರವಾಗಿದ್ದ ಅಶ್ವತ್ಥ ರೆಡ್ಡಿ ಅವರ ಸರಳತೆ, ಸಮಾನತೆ ಹಾಗೂ ಜಾತ್ಯತೀತ ತತ್ವಗಳನ್ನು ಇಂದಿನ ಯುವಕರು ರೂಢಿಸಿಕೊಳ್ಳಬೇಕಿದೆ ಎಂದರು.

ಕಮ್ಮವಾರಿ ಸಮಾಜದ ಮುಖ್ಯ ಕಸುಬು ಕೃಷಿ. ಆದರೆ ಇಂದು ಕೃಷಿ ಕ್ಷೇತ್ರವೂ ಸಹ ಆತಂಕದಲ್ಲಿದೆ. ಇಂತಹ ವೇಳೆಯಲ್ಲಿ ಸಮಾಜವು ಶೈಕ್ಷಣಿಕ ಹಾಗು ಇತರೆ ಆದಾಯ ತರುವ ವಲಯಗಳ ಕಡೆ ಗಮನ ಹರಿಸಬೇಕಿದೆ. ಈ ಹಿಂದೆ ಇದ್ದಂತಹ ಗೊಂಚಿಗಾರ, ಗೌಡ ಎಂಬ ಅಹಮ್ಮುಗಳನ್ನು ಬಿಟ್ಟು, ಸಮಾನತೆಯ ಜೀವನಕ್ಕೆ ಒಗ್ಗಿಕೊಂಡಾಗ ಮಾತ್ರ ಎಲ್ಲಾ ವರ್ಗದ ಜನರು ನಮ್ಮನ್ನು ಅಪ್ಪಿಕೊಳ್ಳುತ್ತಾರೆ ಎಂದು ಸಲಹೆ ನೀಡಿದರು.

ಡಾ. ಸಂಗೇನಹಳ್ಳಿ ಅಶೋಕ್ ಕುಮಾರ್ ಮಾತನಾಡಿ, ಸಮೀಕ್ಷೆ ಪ್ರಕಾರ ಕಮ್ಮವಾರಿ ಸಮಾಜ 1881ರ ಜನಸಂಖ್ಯೆ ಆಧಾರದಲ್ಲಿ ದೇಶದಲ್ಲಿ ಏಳು ಲಕ್ಷ ಜನಸಂಖ್ಯೆ ಇತ್ತು. ಪ್ರಸ್ತುತ ಕರ್ನಾಟಕ 8 ಲಕ್ಷ, ಆಂಧ್ರದಲ್ಲಿ 60 ಲಕ್ಷ, ತಮಿಳುನಾಡು 15 ಲಕ್ಷ, ಒರಿಸ್ಸಾದಲ್ಲಿ 11 ಲಕ್ಷ ಜನಸಂಖ್ಯೆ ಇದೆ. ಸಮಾಜದಲ್ಲಿ 1200 ಗೋತ್ರಗಳು ಬರಲಿವೆ. 3ನೇ ಶತಮಾನದಲ್ಲಿಯೇ ಸಮಾಜದ ಐತಿಹ್ಯ ತಿಳಿದು ಬಂದಿದೆ ಎಂದು ಮಾಹಿತಿ ನೀಡಿದರು.

ಇದೇವೇಳೆ ಕಮ್ಮವಾರಿ ಸಮಾಜದಲ್ಲಿ ಸಂಘಕ್ಕೆ ದೇಣಿಗೆ ನೀಡಿದ ದಾನಿಗಳು ಹಾಗು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಕೃಷಿ, ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀಮತಿ ತಿಪ್ಪಮ್ಮ ದಿ. ಅಶ್ವತ್ಥ ರೆಡ್ಡಿ, ಜಿ.ಎ. ಶ್ಯಾಮ್ ಪ್ರಸಾದ್, ಜಿ.ಎ. ರಮೇಶ್ ಬಾಬು, ಜಿಲ್ಲಾ ಕಮ್ಮವಾರಿ ಸಂಘದ ಅಧ್ಯಕ್ಷ ವೆಲ್ಲೂರು ವೆಂಕಟರೆಡ್ಡಿ, ತಾಲ್ಲೂಕು ಅಧ್ಯಕ್ಷ ಜಿ.ವಿ. ರಂಗನಾಥ ರೆಡ್ಡಿ, ಖ್ಯಾತ ವೈದ್ಯ ಡಾ. ಸಂಜಯ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಡಾ.ವಿಜಯಲಕ್ಷ್ಮಿ, ಭಾರತೀಯ ಕಿಸಾನ್ ಸಭಾ ಉಪಾಧ್ಯಕ್ಷ ಮೇಕಾ ಮುರಳಿ, ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ವೇಣುಗೋಪಾಲ ರೆಡ್ಡಿ, ಜಿ.ಪಂ. ಮಾಜಿ ಸದಸ್ಯರಾದ ಎಸ್.ಕೆ. ರಾಮರೆಡ್ಡಿ, ಕೆ.ವಿ. ರಾಮಕೃಷ್ಣ ರೆಡ್ಡಿ, ಹೊಸದುರ್ಗ ಹರೀಶ್, ಚಿತ್ರದುರ್ಗ ಪ್ರತಾಪ್ ರೆಡ್ಡಿ, ಜಿ. ಮಾಧವ ರೆಡ್ಡಿ, ಬಿ.ಡಿ. ಹನುಮಂತರೆಡ್ಡಿ, ಶಿವಣ್ಣ ರೆಡ್ಡಿ, ಪ್ರಕಾಶ್ ರೆಡ್ಡಿ, ರಮೇಶ್ ರೆಡ್ಡಿ, ಮಿಲ್ಟ್ರಿ ತಿಪ್ಪೇಸ್ವಾಮಿ, ತಾಲ್ಲೂಕು ಕಮ್ಮವಾರಿ ಸಮಾಜದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಕೋವಿಡ್ ಲಸಿಕೆ ಪಡೆಯದವರಿಗೆ ಪಾಲಿಕೆ ಬಸ್ ಇಲ್ಲ

ಥಾಣೆ, ನ. 13 – ಕನಿಷ್ಠ ಒಂದು ಡೋಸ್ ಆದರೂ ಕೊರೊನಾ ಲಸಿಕೆ ಪಡೆಯದವರು ಥಾಣೆ ನಗರ ಪಾಲಿಕೆ ಬಸ್‌ಗಳಲ್ಲಿ ಪ್ರಯಾಣಿಸುವಂತಿಲ್ಲ ಎಂದು ನಗರದ ಮೇಯರ್ ನರೇಶ್ ಮಾಸ್ಕೆ ತಿಳಿಸಿದ್ದಾರೆ.

ಕನಿಷ್ಠ ಒಂದು ಡೋಸ್ ಲಸಿಕೆ ಪಡೆಯದ ನೌಕರರಿಗೆ ವೇತನ ಕೊಡುವುದಿಲ್ಲ ಎಂದು ಥಾಣೆ ಪಾಲಿಕೆ ಇತ್ತೀಚೆಗಷ್ಟೇ ಆದೇಶ ಹೊರಡಿಸಿತ್ತು.

ನವೆಂಬರ್ ಅಂತ್ಯದ ಒಳಗೆ ಎಲ್ಲರಿಗೂ ಲಸಿಕೆ ಕೊಡುವ ಉದ್ದೇಶದಿಂದ ಈ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು


**ಸೈಟ್ ಬೇಕಾಗಿದೆ**

ಶಿವಕುಮಾರಸ್ವಾಮಿ ಬಡಾವಣೆ, ತರಳಬಾಳು ಬಡಾವಣೆ, ವಿದ್ಯಾನಗರದಲ್ಲಿ ಉತ್ತರ, ಪೂರ್ವ ದಿಕ್ಕಿನ 30x40, 30x50, 40x60 ಅಳತೆಯ ಸೈಟ್ ಬೇಕಾಗಿದೆ.

94482 32901
94492 66296



**ವಿದ್ಯಾರ್ಥಿಗಳಿಗೊಂದು ಸಿಹಿ ಸುದ್ದಿ!**

**HOW TO IMPROVE MEMORY & CONCENTRATION**



ಪ್ರಪಂಚದಲ್ಲಿ 95% ವಿದ್ಯಾರ್ಥಿಗಳು ಅವರ ಮೆದುಳಿನ ಎಡ ಭಾಗವನ್ನು ಹೆಚ್ಚು ಬಳಸುತ್ತಾರೆ. ಆದರೆ 5% ವಿದ್ಯಾರ್ಥಿಗಳು ಮೆದುಳಿನ ಬಲ ಭಾಗವನ್ನು ಹೆಚ್ಚು ಹೆಚ್ಚು ಬಳಸಿಕೊಂಡು 90%ಕ್ಕೂ ಅಧಿಕ ಅಂಕ ಗಳಿಸುತ್ತಾರೆ. ಮೆದುಳಿನ ಬಲ ಭಾಗವನ್ನು ಹೆಚ್ಚು ಬಳಸಿ ಕೊಂಡಂತೆಲ್ಲಾ ನಮ್ಮ ನೆನಪಿನ ಶಕ್ತಿ ಮತ್ತು ಕ್ರಿಯೇಟಿವಿಟಿ ಜಾಸ್ತಿಯಾಗುತ್ತಾ ಹೋಗುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಖ್ಯಾತ ತರಬೇತುದಾರರಾದ ಎಸ್.ಪ್ರಶಾಂತ್‌ರವರು, ಮೆದುಳಿನ ಇನ್ನೊಂದು ಭಾಗವನ್ನು ಬಳಸುವುದು ಹೇಗೆ ಮತ್ತು ಹೆಚ್ಚು ಅಂಕ ಗಳಿಸುವುದು ಹೇಗೆ ಎಂದು ತಿಳಿಯಲು ಮೆಮೋರಿ ಸೆಮಿನಾರ್‌ನಲ್ಲಿ ನೀವು ತಪ್ಪದೇ ಪೋಷಕ ರೊಂದಿಗೆ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಿ.

ಉಚಿತ ಪ್ರವೇಶ:

ಇಂದು (ಭಾನುವಾರ) 14-11-2021
1ನೇ ಸೆಮಿನಾರ್ ಬೆಳಿಗ್ಗೆ 11 ರಿಂದ 12.30
2ನೇ ಸೆಮಿನಾರ್ ಸಂಜೆ 4.30 ರಿಂದ 6.00
3ನೇ ಸೆಮಿನಾರ್ ಸಂಜೆ 6.30 ರಿಂದ 8.00
(ಯಾವುದಾದರು ಒಂದು ಸೆಮಿನಾರ್‌ನಲ್ಲಿ ಭಾಗವಹಿಸಿ)

ಸ್ಥಳ: ರೋಟರಿ ಬಾಲಭವನ, ಸೀತಮ್ಮ ಹೈಸ್ಕೂಲ್ ಎದುರು, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

ಮೆದುಳಿನ ಅದ್ಭುತ ಶಕ್ತಿಯ ಪ್ರದರ್ಶನ ನೋಡಲು ಮರೆಯದಿರಿ.

# ಕೇಂದ್ರ ಆರೋಗ್ಯ ಇಲಾಖೆ ತಂಡ ಭೇಟಿ

**(1ನೇ ಪುಟದಿಂದ)** ಶಂಷೀಪುರ ಆರೋಗ್ಯ ಕೇಂದ್ರಗಳಿಗೆ 9 ಜನರ ತಂಡವು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿತು.

ಗುತ್ತೂರು ಗ್ರಾಮಕ್ಕೆ ಭೇಟಿ ನೀಡಿ, ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ವಿತರಿಸುವ ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ, ಕ್ರೀಡಾ ಚಟುವಟಿಕೆಗಳ ಬಗ್ಗೆ ಶಿಕ್ಷಕಿ ಬಿ.ಎಸ್. ನಿರ್ಮಲಾ ಅವರಿಂದ ಮಾಹಿತಿ ಪಡೆಯಲಾಯಿತು.

ಬೆಳ್ಳೂಡಿ ಅಂಗನವಾಡಿ ಕೇಂದ್ರ ಮತ್ತು ಆಸ್ಪತ್ರೆಯಲ್ಲಿ ರೋಗಿಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಮಧ್ಯಾಹ್ನ ಹರಿಹರ ನಗರದ ಸಾರ್ವಜನಿಕ ಆಸ್ಪತ್ರೆಗೆ ಬಂದ ತಂಡವು, ಐಸಿಟಿಸಿ ವಿಭಾಗಕ್ಕೆ ಭೇಟಿ ಮಾಡಿ ಪರಿಶೀಲಿಸಿತು. ಎಕ್ಸ್‌ರೇ ವಿಭಾಗದಲ್ಲಿ ಜನರಿಂದ ಪಡೆಯುವ ದರದ ಬಗ್ಗೆ ವಿಚಾರಿಸಿ, ಸಿಬ್ಬಂದಿಗಳು ಗುರುತಿನ ಚೀಟಿ ಧರಿಸುವಂತೆ ಸೂಚಿಸಿತು.

ಚುಚ್ಚುಮದ್ದು ಕೊಠಡಿಗೆ ತೆರಳಿ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಲಾಯಿತು. ನಂತರ ವೈದ್ಯರುಗಳೊಂದಿಗೆ ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಡಾ ಪ್ರಣವ್ ಭೂಷಣ್, ಡಾ ಮಹೇಶ್ ಭಗವತ್, ಮರೀನ್ ಜಾನೆ ಕ್ರಾಸ್, ಪಮಿಸುಖಿ ಲಿಂಗಾನಡ್, ನೀಲಮ್ಮ ಟರ್ಕಿ, ದೀಕ್ಷ ದಹಪುರ್, ಮಹಮ್ಮದ್ ಅಶಿಲ್, ಸ್ಟೀಲ್ ಗ್ರೇಸ್ ರಾಜ್ಯ ಅಪಾರ ನಿರ್ದೇಶಕಿ ಡಾ ಪರಿಮಳ, ಡಾ. ಮೀನಾಕ್ಷಿ, ಡಿಹೆಚ್‌ಓ ನಾಗರಾಜ್, ನಟರಾಜ್, ಸುರೇಶ್ ಬಾರ್ಕಿ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಹನುಮನಾಯ್ಕ್, ಡಾ.ಸವಿತಾ, ಡಾ.ರಾಜಪ್ಪ, ಡಾ.ಮಮತಾ, ಡಾ. ಪಂಕಜಾ, ಎಂ. ಉಮ್ಮಣ್ಣ, ಆಶ್ರಫ್ ಅಲಿ, ಸಿಬ್ಬಂದಿಗಳಾದ ಶೋಭಾ, ರೂಪಾ, ಸುಮಂಗಳ, ಮಂಜುಳಾ, ಸವಿತಾ ವಿಜಯಕುಮಾರ್, ಅಂಗನವಾಡಿ ಶಿಕ್ಷಕಿಯರಾದ ಎಸ್.ಬಿ. ಲಲಿತಮ್ಮ ಬೆಳ್ಳೂಡಿ, ಸುಜಾತ, ಗೀತಮ್ಮ ಇತರರು ಹಾಜರಿದ್ದರು,

# ಭರಮಸಾಗರ ಗ್ರಾ.ಪಂ. ಅಧ್ಯಕ್ಷರಾಗಿ ತಾಜ್ ಬೀ




ಭರಮಸಾಗರ, ನ.13- ಸ್ಥಳೀಯ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಪುಷ್ಪಲತಾ ಜಗದೀಶ್ ರಾಜೀನಾಮೆ ಸಲ್ಲಿಸಿದ ನಂತರ, ತೆರವಾದ ಕಾರಣಕ್ಕೆ ಗ್ರಾಮದ ಕಾಂಗ್ರೆಸ್ ಮುಖಂಡ ಹಾಗೂ ಜಿ.ಪಂ. ಮಾಜಿ ಉಪಾಧ್ಯಕ್ಷ ಹೆಚ್.ಎನ್. ತಿಪ್ಪೇಸ್ವಾಮಿ ಸಲಹೆ ಮೇರೆಗೆ ಸಾರಂಭಿ ಮುಸ್ತಾಫ್ ಸಾಬ್ ಮನೆಯವರಾದ ತಾಜ್ ಬೀ ರಜಾಕ್‌ಸಾಬ್ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಸದಸ್ಯರಾದ ಪುಷ್ಪಲತಾ ಜಗದೀಶ್, ಗ್ರಾ.ಪಂ. ಸದಸ್ಯರಾದ ಬಂಗಾರದ ಶ್ರೀನಿವಾಸ್, ಕೋಡಿ ರಂಗೇನಹಳ್ಳಿ ಹನುಮಂತಣ್ಣ, ರುದ್ರೇಶ್, ರವಿ ನಾಯಕ್, ಬಿ.ಕೆ. ನಾಸಿರ್ ಪಾಷ, ಗೌಡ್ರು ರಾಜಣ್ಣ, ಕಲೀಲ್ ಸಾಬ್, ಬುಡೇನ್ ಸಾಬ್, ಕೆ.ಟಿ.ಸಿ. ಮಂಜುನಾಥ್, ಹೆಚ್.ಎನ್. ಕಿರಣ್, ಜಮೀರ್ ಸಾಬ್, ದುರ್ಗೇಶ್, ಅಡಿಕೆ ವರ್ತಕ ಎಂ. ಮುನ್ನ, ಎಂ.ಆರ್. ಕುಮಾರಿ ಆಸ್ಮಾ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಶಮೀಮ್ ಪಾಷಾ, ಕೆ.ಪಿ. ಹರೀಶ್ ಕುಮಾರ್, ರಾಜು, ನಿಜಾಮುದ್ದೀನ್, ರೇವಣಪ್ಪ, ಕೆ.ಟಿ.ಸಿ. ಶ್ರೀನಿವಾಸ್, ಪಿಡಿಓ ಶಿವಣ್ಣ ಹಾಗೂ ಇತರರು ಹಾಜರಿದ್ದರು.

ನೂತನ ಅಧ್ಯಕ್ಷರನ್ನು ಹಿರಿಯ ಪತ್ರಕರ್ತ ಬಿ.ಜೆ. ಅನಂತಪದ್ಮನಾಭರಾವ್, ಬಿಜೆಪಿಯ ಅಲ್ಪಸಂಖ್ಯಾತರ ರಾಜ್ಯ ಸಂಘಟನೆಯ ಮುಖಂಡ ಟಿಪ್ಪು ಸುಲ್ತಾನ್ ಅವರು ಅಭಿನಂದಿಸಿದ್ದಾರೆ.

## ಬಿಟ್ ಹಗರಣ: ಎಸ್ಐಟಿಗೆ ವಹಿಸಿ

**(1ನೇ ಪುಟದಿಂದ)** ನೀಡಿದ ಸಂದರ್ಭದಲ್ಲಿ ಹಗರಣದ ಬಗ್ಗೆ ಎಫ್.ಬಿ.ಐ. ತಿಳಿಸಿತ್ತು ಎಂದೂ ಹೇಳಿಕೊಂಡಿದ್ದಾರೆ.

ಈ ಹಗರಣದ ಬಗ್ಗೆ ಹಲವು ದೇಶಗಳು ತನಿಖೆ ನಡೆಸುತ್ತಿದ್ದು, ಸತ್ಯ ಬಯಲಿಗೆ ಬರಬೇಕು. ಸರ್ಕಾರ ಹಗರಣ ನಡೆಸಿದವರ ಜೊತೆ ಕೈ ಜೋಡಿಸಿದೆ, ಇಲ್ಲವೇ ಕಳಪೆಯಾಗಿ ತನಿಖೆ ನಡೆಸುತ್ತಿದೆ. ಇದರಿಂದಾಗಿ ಬಸವರಾಜ ಬೊಮ್ಮಾಯಿ ಅವರ ವರ್ಚಸ್ಸಿನ ಬಗ್ಗೆ ಅನುಮಾನ ಉಂಟಾಗಿದೆ. ಈ ಹಗರಣದಲ್ಲಿ ಅವರ ರಾಜಕೀಯ ಭವಿಷ್ಯ ಹಾಗೂ ಪ್ರತಿಷ್ಠೆ ಪಣದಲ್ಲಿದೆ, ಹೀಗಾಗಿ ಅವರು ಸುಪ್ರೀಂ ಕೋರ್ಟ್ ನೇತೃತ್ವದ ಎಸ್.ಐ.ಟಿ. ತನಿಖೆಗಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ಸುರ್ಜೇವಾಲಾ ಒತ್ತಾಯಿಸಿದ್ದಾರೆ.

|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ||

### ಕೈಲಾಸ ಸಮಾರಾಧನೆ ಆಹ್ವಾನ

ಜನನ : 25-09-1933



ಮರಣ : 07-11-2021

**ಶ್ರೀ ರವಿಶಂಕರ್ ಪಾಟೀಲ್ ಮತ್ತು ಸಹೋದರರು**

ಬಿ ಬ್ಲಾಕ್, ವಿದ್ಯಾನಗರ, ಹರಿಹರ.

**ಇವರು ಮಾಡುವ ವಿಜ್ಞಾಪನೆಗಳು.**

ದಿನಾಂಕ : 07.11.2021ನೇ ಭಾನುವಾರ ಬೆಳಗಿನ ಜಾವ 1.10ಕ್ಕೆ ನಮ್ಮ ತಂದೆಯವರಾದ

**ಶ್ರೀ ಡಾ|| ಜಿ. ಚನ್ನವೀರನಗೌಡ್ರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 15.11.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಹರಿಹರದ ವಿದ್ಯಾನಗರ 'ಬಿ' ಬ್ಲಾಕ್, 3ನೇ ಮೇನ್, 5ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಲಾಗುವುದು. ತಾವುಗಳು ಆಗಮಿಸಿ, ಅವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀ ರವಿಶಂಕರ್ ಪಾಟೀಲ್ ಮತ್ತು ಸಹೋದರರು, ಪಾಟೀಲ್ ವಂಶಸ್ಥರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದುಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಸೆನೆಟ್ ಸದಸ್ಯರಾಗಿ ಡಾ. ರವೀಂದ್ರ

**(1ನೇ ಪುಟದಿಂದ)** ಸಂಸ್ಥೆಗಳ ಕ್ಷೇತ್ರದ 5 ಸ್ಥಾನಗಳಿಗೆ ಸ್ಪರ್ಧೆ ಮಾಡಿದ್ದ 14 ಜನರಲ್ಲಿ ಅತ್ಯಧಿಕ ಮತಗಳನ್ನು ಗಳಿಸಿದ ಡಾ. ಬಣಕಾರ್ ಸೇರಿದಂತೆ, ಐವರು ಚುನಾಯಿತಗೊಂಡಿದ್ದಾರೆ. 1996 ರಲ್ಲಿ ಸ್ಥಾಪನೆಗೊಂಡಿರುವ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಸೆನೆಟ್ ಸದಸ್ಯರಾಗಿ ನಾಲ್ಕನೇ ಬಾರಿಗೆ ಆಯ್ಕೆಯಾಗಿರುವ ಏಕೈಕ ಹಿರಿಯ ಸೆನೆಟ್ ಸದಸ್ಯ ಎಂಬ ಹೆಗ್ಗಳಿಕೆಗೆ ಡಾ. ರವೀಂದ್ರ ಬಣಕಾರ್ ಪಾತ್ರರಾಗಿದ್ದಾರೆ.

ಡಾ. ಬಣಕಾರ್ ಅವರನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್. ಬಿ. ಮುರುಗೇಶ್, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್, ಬಾಪೂಜಿ ವಿದ್ಯಾಸಂಸ್ಥೆ ಮತ್ತು ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

## ದೈವ ಮಂಡಳಿ ಅಧ್ಯಕ್ಷರಾಗಿ ವಿಠಲ್

**(1ನೇ ಪುಟದಿಂದ)** ಮಂದಿರದಲ್ಲಿ ಇಂದು ನಡೆದ ಮಂಡಳಿಯ ಸರ್ವ ಸದಸ್ಯರ ಮಹಾಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ, ಸಮಾಜದ ಮುಖಂಡರುಗಳಾದ ಕೆ.ಬಿ. ಶಂಕರನಾರಾಯಣ, ಆರ್.ಕೆ. ಆನಂದರಾವ್, ಹೆಚ್.ಕೆ .ಪರಶುರಾಮ್, ಮಹೇಂದ್ರಕರ್ ಮಂಜುನಾಥ (ಅವಿನಾಶ್), ಎ.ಪ್ರಭಾಕರ್, ಕೆ.ಬಿ.ಮೋಹನರಾವ್, ಶ್ರೀಮತಿ ಕೌಸಲ್ಯಬಾಯಿ ಖಟಾವಕರ್, ಮನೋಹರ ಎಸ್. ಬೊಂಗಾಳೆ ಮತ್ತು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ಪರಶುರಾಮ್ ಹೊವಳೆ (ಕೋಗಿಲೆ) ಅವರ ಪ್ರಾರ್ಥನೆಯ ನಂತರ ಮನೋಹರ ವಿ. ಬೊಂಗಾಳೆ ಸ್ವಾಗತಿಸಿದರು. ವಿಠಲ್ ರಾಕುಂಡೆ ವಂದಿಸಿದರು.

## ಲಸಿಕೆ ಪಡೆಯದವರಿಗೆ ಬಸ್ ಇಲ್ಲ

**(1ನೇ ಪುಟದಿಂದ)** ಮಾಸ್ಕೆ ಹೇಳಿದ್ದಾರೆ. ಮನೆ ಮನೆಗೆ ತೆರಳಿಯೂ ಲಸಿಕೆ ನೀಡಲಾಗುತ್ತಿದೆ. ಲಸಿಕೆ ಪಡೆಯದವರು ತ್ವರಿತವಾಗಿ ಲಸಿಕಾ ಕೇಂದ್ರಗಳಿಗೆ ತೆರಳಿ ಲಸಿಕೆ ಪಡೆಯಬೇಕು ಎಂದವರು ಆಗ್ರಹಿಸಿದ್ದಾರೆ.

## ನೀರ್ಥಡಿಯಲ್ಲಿ ಇಂದು ರೈತ ಸಂಘದ ಉದ್ಘಾಟನೆ

ದಾವಣಗೆರೆ ತಾಲ್ಲೂಕು ನೀರ್ಥಡಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಉದ್ಘಾಟನೆ ಹಾಗೂ ಬಹಿರಂಗ ಸಭೆಯನ್ನು ಇಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ನಾಮಫಲಕ ಉದ್ಘಾಟನೆ ಮಾಡಲಿದ್ದಾರೆ.

# ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ಬೆಂಕಿ ಅವಘಡ

ಹರಿಹರ, ನ.13- ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸ್ವಲ್ಪದರಲ್ಲಿಯೇ ದೊಡ್ಡ ಅನಾಹುತ ತಪ್ಪಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಇದೇ ದಿನಾಂಕ 6ರ ಶನಿವಾರ ರಾತ್ರಿ 8 ಗಂಟೆ ಸಮಯದಲ್ಲಿ ಒಳ ರೋಗಿಗಳಿರುವ 114ನೇ ವಾರ್ಡ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಪರಿಣಾಮ ಇದ್ದಕ್ಕಿದ್ದಂತೆ ಫ್ಯಾನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಧಗಧಗನೇ ಉರಿಯಲು ಆರಂಭಿಸಿತು. ಇದನ್ನು ಗಮನಿಸಿದ ಒಳರೋಗಿಗಳು ಗಾಬರಿಗೊಂಡು ವಾರ್ಡಿನಿಂದ ಹೊರಗೆ ಓಡಿ ಹೋಗಿ ಕರ್ತವ್ಯದಲ್ಲಿದ್ದ ಸಿಬ್ಬಂದಿಗಳಿಗೆ ಮಾಹಿತಿ ನೀಡಿದರು.



ತಕ್ಷಣ ಎಚ್ಚೆತ್ತುಕೊಂಡ ಶುಶ್ರೂಷಕಿಯರು ಹಾಗೂ ಡಿ. ಗ್ರೂಪ್ ನೌಕರರು ಬೆಂಕಿ ಆರಿಸುವ ಯಂತ್ರದಿಂದ ಬೆಂಕಿಯನ್ನು ನಂದಿಸಿದರು. ಅವಘಡ ಸಂಭವಿಸಿದ ವಾರ್ಡ್ ಪಕ್ಕದಲ್ಲಿಯೇ ನೂತನವಾಗಿ ಆರಂಭಗೊಂಡಿರುವ ಆಕ್ಸಿಜನ್ ಘಟಕ ಇತ್ತು. ಬೆಂಕಿ ಏನಾದರೂ ವ್ಯಾಪಿಸಿದ್ದರೆ ಆಸ್ಪತ್ರೆಯಲ್ಲಿ ದೊಡ್ಡ ಅನಾಹುತ ನಡೆದು ಹೋಗುತ್ತಿತ್ತು ಎನ್ನಲಾಗಿದೆ.

> ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಆದ ಅವಘಡದ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಅಲ್ಲಿನ ವೈದ್ಯಾಧಿಕಾರಿಗಳಾಗಲೀ, ಸಿಬ್ಬಂದಿಗಳಾಗಲೀ ಯಾರೂ ಇಲ್ಲಿಯವರೆಗೂ ಮಾಹಿತಿ ನೀಡಿರುವುದಿಲ್ಲ.
>
> **- ಡಾ. ಚಂದ್ರಮೋಹನ್**
> ತಾಲ್ಲೂಕು ವೈದ್ಯಾಧಿಕಾರಿಗಳು, ಹರಿಹರ.

# ಸವಾಲಿಗೆ ಸಿದ್ಧ ಮಾತಿಗೂ ಬದ್ಧ

**(1ನೇ ಪುಟದಿಂದ)** ರೂಪಾಯಿಗಳ ಕಾಮಗಾರಿ ಪ್ರಗತಿಯಲ್ಲಿದೆ. ಎಸ್ಟಿ ನಿಗಮದಿಂದಲೂ ಕ್ಷೇತ್ರದ ಜನತೆಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲಾಗಿದೆ. ನನ್ನ ಅಧಿಕಾರವಧಿಯಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳಿಗೆ ನಾನು ಗಮನಹರಿಸುತ್ತೇನೆ ಎಂದರು.

1994 ರಿಂದಲೂ ನಾನು ಜಗಳೂರು ವಿಧಾನಸಭಾ ಕ್ಷೇತ್ರದ ಜನರೊಂದಿಗೆ ಬದುಕುತ್ತಿದ್ದೇನೆ. ನಾನು ಏನು ಎಂಬುದು ಕ್ಷೇತ್ರದ ಜನರಿಗೆ ಗೊತ್ತಿದೆ. 2008 ರಲ್ಲಿ ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದ ರಾಜೇಶ್ ಅವರಿಗೆ ಕ್ಷೇತ್ರದ ಜನರ ಬಗ್ಗೆ ತಿಳಿದಿಲ್ಲ. ನಾನು ಸದಾ ಜನರೊಂದಿಗೆ ಬೆರೆತು ಬದುಕಿದ್ದೇನೆ. ನನಗೆ ಐಷಾರಾಮಿ ಜೀವನ ಮಾಡುತ್ತಾರೆ ಎಂದು ಹಾಗೂ ಇವರು ನಮ್ಮ ಕ್ಷೇತ್ರದವರೇ ಅಲ್ಲ ಎಂದು ಪದೇ ಪದೇ, ಸುಳ್ಳು ಆರೋಪ ಮಾಡುತ್ತಿರುವ ಮಾಜಿ ಶಾಸಕರಿಗೆ ನಾನು ಉತ್ತರ ನೀಡುವುದಿಲ್ಲ. ಆದರೆ ನನ್ನ ಕ್ಷೇತ್ರದ ಜನತೆ ಮುಂದಿನ ಚುನಾವಣೆಯಲ್ಲಿ ಅವರಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷದಲ್ಲಿ ಮುಂದಿನ ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದರಿಂದ ಅವರು ಮಾನಸಿಕವಾಗಿ ಜರ್ಜರಿತರಾಗಿದ್ದಾರೆ. ಅವರ ವಿರುದ್ಧ ಮಾತನಾಡುವ ಬದಲು ವಿನಾಕಾರಣ ನನ್ನ ಮೇಲೆ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ರಾಮಚಂದ್ರ ಟೀಕಿಸಿದರು. 2800 ಕೋಟಿ ರೂಪಾಯಿಗಳ ಭದ್ರಾ ಹಿನ್ನೀರಿನ ಯೋಜನೆ ನಮ್ಮ ಕ್ಷೇತ್ರಕ್ಕೆ ಬಿಟ್ಟು ಹೋಗಲು ಮಾಜಿ ಶಾಸಕರ ಬೇಜವಾಬ್ದಾರಿಯೇ ಕಾರಣ ಎಂದು ಆರೋಪಿಸಿದ ಶಾಸಕರು, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಪೈಪ್‌ಲೈನ್ ಅಳವಡಿಸಿದ್ದರೂ ಸಹ, ಎಸ್ಟಿ ಮೀಸಲು ಕ್ಷೇತ್ರವಾಗಿದ್ದರೂ ಸಹ ಮಹತ್ವದ ಯೋಜನೆ ಕೈ ಬಿಟ್ಟು ಹೋಗಿರುವುದು ದುರಂತದ ಸಂಗತಿ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್ ಮಾತನಾಡಿ, ಶಾಸಕರು ಪಕ್ಷವನ್ನು ತ್ಯಜಿಸಿದ್ದು ಭದ್ರಾ ಮೇಲ್ದಂಡೆ ಯೋಜನೆಗಾಗಿಯೇ ಹೊರತು ಯಾವುದೇ ಆಮಿಷಕ್ಕಾಗಿ ಅಲ್ಲ. ಮಾಜಿ ಶಾಸಕರು ವಿನಾಕಾರಣ ಪದೇ ಪದೇ ಶಾಸಕರು ಹೊರಗಿನವರು, ಐಷಾರಾಮಿ ಜೀವನ ನಡೆಸುತ್ತಾರೆ ಎಂದು ಹೇಳಿಕೆ ನೀಡುವುದನ್ನು ಪಕ್ಷ ಖಂಡಿಸುತ್ತದೆ. ಅವರ ಟೀಕೆಗೆ ದಾಖಲೆಗಳೊಂದಿಗೆ ಉತ್ತರ ನೀಡುತ್ತೇವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಮುಖಂ ಡರು ಹಾಗೂ ದಿಶಾ ಸಮಿತಿ ಸದಸ್ಯ ವಕೀಲರಾದ ತಿಪ್ಪೇಸ್ವಾಮಿ, ವಿಶ್ವನಾಥ್, ಹೆಚ್. ನಾಗರಾಜ್ ಸೊಕ್ಕೆ, ಕೆಂಚನಗೌಡ ಡಿ.ವಿ. ನಾಗಪ್ಪ, ಜೆ.ವಿ. ನಾಗರಾಜ್, ಚಟ್ನಹಳ್ಳಿ ರಾಜಣ್ಣ, ಶಿವಕುಮಾರಸ್ವಾಮಿ, ಪಟ್ಟಣ ಪಂಚಾಯತ್ ಅಧ್ಯಕ್ಷ ಸಿದ್ದಪ್ಪ, ಮಾಜಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಕೆ.ಬಿ. ಸಿದ್ದೇಶ್, ಬಿ. ರವಿಕುಮಾರ್ ಇನ್ನಿತರರಿದ್ದರು.

# ಊಟ ಸೇವಿಸಿ ಅಸ್ವಸ್ಥ

**(1ನೇ ಪುಟದಿಂದ)** ನೂರಕ್ಕೂ ಅಧಿಕ ಜನರು ಆಗಮಿಸಿದ್ದು, ಮದುಮಗನ ದೊಡ್ಡಮ್ಮ ಮಂಜಮ್ಮನವರಿಗೆ ಮಧ್ಯರಾತ್ರಿ 1 ಗಂಟೆಗೆ ಕಾಣಿಸಿಕೊಂಡ ವಿಪರೀತ ವಾಂತಿ, ಬೇಧಿಯಿಂದಾಗಿ ಪ್ರಕರಣ ಬೆಳಕಿಗೆ ಬಂತು ಎಂದು ಮದುಮಗನ ಮಾವ ವಾಸನದ ತಿಪ್ಪೇಶಣ್ಣ ಜನತಾವಾಣಿಗೆ ಮಾಹಿತಿ ನೀಡಿದ್ದಾರೆ.

ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಚಂದ್ರಪ್ಪ ಮಾತನಾಡಿ, 13 ಮಕ್ಕಳು ಸೇರಿದಂತೆ 95 ಜನರಿಗೆ ತಪಾಸಣೆ ಮಾಡಿದ್ದು, ಇವರಲ್ಲಿ 3 ಜನರನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಕಳುಹಿಸಲಾಗಿದೆ. ಆರೋಗ್ಯ ಸುಧಾರಿಸಿದ ಸುಮಾರು 10 ಜನರನ್ನು ಮಾತ್ರ ಆಸ್ಪತ್ರೆಯಿಂದ ಮನೆಗೆ ಕಳಿಸಿಕೊಡಲಾಗಿದೆ. ಉಳಿದವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದರು.

**ತಾತ್ಕಾಲಿಕ ಚಿಕಿತ್ಸಾ ಕೇಂದ್ರ:** ಘಟನೆಗೆ ಕಾರಣವಾದ ಗ್ರಾಮದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ತೆಗೆದು ಜನರ ತಪಾಸಣೆ ನಡೆಸಲಾಗುತ್ತಿದೆ. ಕಾರಣ ಅಡುಗೆಗೆ ಬಳಸಿದ ನೀರಿನಿಂದಲೋ ಅಥವಾ ಆಹಾರ ಪದಾರ್ಥದಿಂದಲೋ ಎಂಬುದನ್ನು ತಿಳಿಯಲು ದಾವಣಗೆರೆ ಲ್ಯಾಬ್‌ಗೆ ಸ್ಯಾಂಪಲ್ ಕಳಿಸಿಕೊಡಲಾಗಿದೆ. ವರದಿಯಿಂದ ಸ್ಪಷ್ಟ ಕಾರಣ ಏನು ಎಂದು ತಿಳಿದು ಬರಲಿದೆ ಎಂಬ ಮಾಹಿತಿ ನೀಡಿದರು.

**ಮನೆ-ಮನೆ ಭೇಟಿ, ತಪಾಸಣೆ:** ಮದುವೆ ಊಟ ಸೇವಿಸಿ ಜನರು ಅಸ್ವಸ್ಥರಾದ ಹಿನ್ನೆಲೆಯಲ್ಲಿ ಶನಿವಾರ ಹಳೆದೇವರ ಹೊನ್ನಾಳಿ ಮತ್ತು ಹೊಸದೇವರ ಹೊನ್ನಾಳಿ ಗ್ರಾಮಗಳಿಗೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಆರ್. ಬಂತಿ, ಹಿರಿಯ ಆರೋಗ್ಯ ನಿರೀಕ್ಷಕ ಶಿವಪದ್ಮ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಎಲ್ಲಾ ಮನೆಗಳಿಗೂ ಭೇಟಿ ನೀಡಿ ಜನರ ಆರೋಗ್ಯ ತಪಾಸಣೆ ನಡೆಸಿದರು. ಮುಂಜಾಗ್ರತಾ ಕ್ರಮವಾಗಿ ಚುಚ್ಚುಮದ್ದು ಹಾಗೂ ಕೆಲ ಮಾತ್ರೆಗಳನ್ನು ನೀಡಿ, ನೀರು-ಆಹಾರ ಸೇವನೆಯಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು ಎಂದು ಜಾಗೃತಿ ಮೂಡಿಸಿದ್ದಾರೆ. ಉಕ್ಕಡಗಾತ್ರಿ ಭಾಗದ ಜನರ ಆರೋಗ್ಯ ಸ್ಥಿತಿ-ಗತಿ ಬಗ್ಗೆ ಮಾಹಿತಿ ತಿಳಿದುಬಂದಿಲ್ಲ.

## ಶ್ರೀ ಕೆ.ಎಲ್. ನಾರಾಯಣ ರಾವ್ ನಿಧನ



ನಗರದ ಹಿರಿಯ ಹೋಟೆಲ್ ಉದ್ಯಮಿಗಳೂ, ಶಾಂತಿ ಕ್ಯಾಂಟೀನ್ ಮಾಲೀಕರೂ ಆಗಿದ್ದ

**ಶ್ರೀ. ಕೆ.ಎಲ್. ನಾರಾಯಣ ರಾವ್**

ಇವರು ದಿನಾಂಕ 13-11-2021 ರ ಶನಿವಾರ ಬೆಳಗಿನ ಜಾವ 2.30 ರ ಸುಮಾರಿಗೆ ತಮ್ಮ ಸ್ವಗೃಹದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 93 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13-11-2021 ರ ಶನಿವಾರದಂದೇ ಮಧ್ಯಾಹ್ನ 1.30 ಕ್ಕೆ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

ದುಃಖತಪ್ತ: **ಪತ್ನಿ,ಪುತ್ರಿಯರು,ಅಳಿಯಂದಿರು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು**

### ನಾಗರಕಟ್ಟೆ ಮಠದ ಶ್ರೀಮತಿ ಸಿದ್ದಮ್ಮ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ಅಮೃತ ವಿದ್ಯಾಲಯ ಹಿಂಭಾಗದ ಗೇಟ್, ವಾಸಿ ನಿವೃತ್ತ ವಾಣಿಜ್ಯ ನಿರೀಕ್ಷಕರಾದ ಎನ್.ಎಂ. ವೀರೇಶ್ ಇವರ ಧರ್ಮಪತ್ನಿ ನಾಗರಕಟ್ಟೆ ಮಠದ ಶ್ರೀಮತಿ ಸಿದ್ದಮ್ಮ (69) ಇವರು ದಿನಾಂಕ 13.11.2021ರ ಶನಿವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿ ಮೃತರ ಅಂತ್ಯಕ್ರಿಯೆಯು ದಿನಾಂಕ 14.11.2021ರ ಭಾನುವಾರ ಬೆಳಗ್ಗೆ 11ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ನಸ್ರೀನ್ ಬಾನು ನಿಧನ



ದಾವಣಗೆರೆ ಕೆಟಿಜೆ ನಗರ 17ನೇ ಕ್ರಾಸ್, ಸಿದ್ದಗಂಗಾ ಸ್ಕೂಲ್ ಎದುರು ವಾಸಿ ಕಾಂಗ್ರೆಸ್ ಮುಖಂಡ ಶೇಖರಪ್ಪ ನಗರ ಶೌಕತ್ ಅಲಿ ಇವರ ಧರ್ಮಪತ್ನಿ, ಶ್ರೀಮತಿ ನಸ್ರೀನ ಬಾನು (46) ಇವರು ದಿನಾಂಕ 13.11.2021ರ ಶನಿವಾರ ರಾತ್ರಿ 8.30ಕ್ಕೆ ನಿಧನರಾದರು. ಪತಿ. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.11.2021ರ ಭಾನುವಾರ ಮಧ್ಯಾಹ್ನ 1.30ಕ್ಕೆ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

### ಎನ್.ಕೆ. ದೊಡ್ಡನಾರಪ್ಪ ಕಾಮನಹಳ್ಳಿ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ ಎನ್.ಕೆ. ದೊಡ್ಡನಾರಪ್ಪ ಕಾಮನಹಳ್ಳಿ (96) ಅವರು ದಿನಾಂಕ 13.11.2021ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.11.2021ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ನಾಗರಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

### ಹರಿಹರದ ಸೌಭಾಗ್ಯ ನಿಧನ



ಹರಿಹರ ಹಂಸಾಗರ ಕಾಂಪೌಂಡ್ ನಿವಾಸಿ ಹಿಂದೂ ಮತ್ತು ಕೌರವ ಪತ್ರಿಕೆ ವರದಿಗಾರರಾದ ಬಿ.ಎಂ. ಚಂದ್ರಶೇಖರ್‌ರವರ ಸಹೋದರ ಬಿ.ಎಂ. ಮಂಜುನಾಥ ಬಿಳೆಬಾಳ ಅವರ ಧರ್ಮ ಪತ್ನಿ ಸೌಭಾಗ್ಯ (56) ಇವರು ದಿನಾಂಕ 13.11.2021 ರ ಶನಿವಾರ ಬೆಳಿಗ್ಗೆ 6.30 ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಹರಿಹರ ವೀರಶೈವ ರುದ್ರಭೂಮಿಯಲ್ಲಿ ದಿನಾಂಕ 13.11.2021ರ ಶನಿವಾರ ಸಂಜೆ 4 ಗಂಟೆಗೆ ನೆರವೇರಿತು.

### ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ : 13-11-2021ರಂದು ನಿಧನರಾದ ಹಿರಿಯ ಹೋಟೆಲ್ ಉದ್ಯಮಿಗಳು, ಶಾಂತಿ ಕ್ಯಾಂಟೀನ್ ಮಾಲೀಕರು, ಮಾರ್ಗದರ್ಶಕರೂ ಆಗಿದ್ದ

**ಶ್ರೀ ಕೆ.ಎಲ್. ನಾರಾಯಣ ರಾವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**ಜಿ.ಮಾಧವಾಚಾರ್**
**ಪಾರಿಜಾತ ಅಸೋಸಿಯೇಟ್ಸ್, ದಾವಣಗೆರೆ**

### ಸ್ಮರಣೆ



**ಕೊಂಡಜ್ಜಿ ಬಸಪ್ಪ**

ಲಿಂಗೈಕ್ಯ: 14-11-1982

ಮಾಜಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರು ಹಾಗೂ ಮಾಜಿ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

**"ನಿಮ್ಮ ಚಿಂತನೆ ಆದರ್ಶಗಳು ನಮಗೆ ದಾರಿದೀಪ"**

ಕೊಂಡಜ್ಜಿ ಷಣ್ಮುಖಪ್ಪ, ಡಾ: ಕೆ. ಬಿ. ಗುರುಮೂರ್ತಿ, ಕೆ. ಬಿ. ವಿಜಯಕುಮಾರ್ ಮೋಹನ್ ಕೊಂಡಜ್ಜಿ, ವಿಧಾನ ಪರಿಷತ್ ಸದಸ್ಯರು, ನಿಖಿಲ್ ಕೊಂಡಜ್ಜಿ, ಎಸ್. ವಿ. ಮಂಜುಳ - ಡಾ: ಎಸ್. ಬಿ. ವಸಂತಕುಮಾರ್ ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕೊಂಡಜ್ಜಿ ಬಳಗ.

**ಕೊಂಡಜ್ಜಿ ಬಸಪ್ಪ ಸರ್ವಮಂಗಳಮ್ಮ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು.**

# ವಾರ ಭವಿಷ್ಯ

**ದಿನಾಂಕ : 14.11.2021 ರಿಂದ 20.11.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೈಗಾರಿಕೋದ್ಯಮಿಗಳಿಗೆ ಕಾರ್ಮಿಕರ ಅಸಹಕಾರ, ಯಂತ್ರಗಳ ರಿಪೇರಿ, ದೊಡ್ಡ ತಲೆನೋವಾಗಿದೆ, ಹಲವು ತಪ್ಪು ನಿರ್ಧಾರಗಳು ಶತ್ರುಗಳ ಬಾಧೆ ಹೆಚ್ಚಾಗುವಂತೆ ಮಾಡಬಹುದು. ಯಾವುದೇ ದೊಡ್ಡ ಮೊತ್ತದ ಖರೀದಿಗೆ ಮೊದಲು ಅನುಭವಿಗಳ ಜೊತೆ ಚರ್ಚಿಸುವುದು ಮೇಲು. ವ್ಯವಹಾರ ನಿಮಿತ್ತ ಮೇಲಿಂದ ಮೇಲೆ ಪ್ರಯಾಣ ಮಾಡಲೇಬೇಕಾದ ಪ್ರಸಂಗ ಬರಲಿದೆ. ಹಳೇ ವಿಷಯಗಳನ್ನೇ ಮತ್ತೆ ಮತ್ತೆ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಯುವಕರು ತಮ್ಮ ನಡಾವಳಿಯನ್ನು ಬದಲಾಯಿಸಿಕೊಳ್ಳಿ, ಹಿರಿಯರನ್ನು ಗೌರವಿಸುವುದರಿಂದ ನಿಮ್ಮ ಘನತೆ ಹೆಚ್ಚಲಿದೆ. ಗುರುಗಳ ಸೇವೆಯನ್ನು ಮಾಡಿರಿ. ಭಾನು -ಸೋಮ-ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನೌಕಾಪಡೆಯಲ್ಲಿ ಕೆಲಸ ಮಾಡುವವರಿಗೆ ಮುಂಬಡ್ತಿ, ಸ್ನೇಹಿತರ ಮಾರ್ಗದರ್ಶನದಲ್ಲಿ ಸಂಪತ್ತಿನ ಅಭಿವೃದ್ಧಿ, ಪ್ರಾಮಾಣಿಕರಾದ ಉನ್ನತಾಧಿಕಾರಿಗಳು, ರಾಜಕಾರಣಿಗಳ ಒತ್ತಡದ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸಬೇಕಾಗಬಹುದು. ನಿರುದ್ಯೋಗಿ ಪದವೀಧರರಿಗೆ ದೂರದೂರಿನಲ್ಲಿ ಸಾಧಾರಣ ವೇತನದ ನೌಕರಿ ಸಿಗಲಿದೆ. ವ್ಯಾಪಾರದಲ್ಲಿ ನಿಮ್ಮದೇ ಆದ ಅಭಿಪ್ರಾಯಗಳಿಗೆ ಅಂಟಿಕೊಂಡಲ್ಲಿ ಹೆಚ್ಚಿನ ಲಾಭ, ಕೃಷಿ ಕ್ಷೇತ್ರದಲ್ಲಿ ಮಾಡಬಹುದಾದ ಹೂಡಿಕೆ ಮುಂದೆ ವೃದ್ಧಿಯಾಗಲಿದೆ. ಮಹಿಳೆಯರು ತಮ್ಮ ಆರ್ಥಿಕ ಸಬಲತೆಗೆ ಪ್ರತಿರೋಧವನ್ನು ಎದುರಿಸಬೇಕಾಗಬಹುದು. ಆದರೆ ಅಂತಿಮವಾಗಿ ಅವರೇ ಯಶಸ್ವಿಯಾಗುವರು. ಬುಧ -ಗುರು -ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಹಣಕಾಸಿನ ಪರಿಸ್ಥಿತಿ ಏರಿಕೆಯಾಗಲು ನಿಮ್ಮ ಕಠಿಣ ಪರಿಶ್ರಮ ಅತ್ಯಗತ್ಯ, ಜೊತೆಗೆ ಅದರ ನಿರ್ವಹಣೆಯನ್ನೂ ಕೂಡ ಅಷ್ಟೇ ಜಾಣತನದಿಂದ ಮಾಡುವುದು ಲೇಸು. ಸಮಸ್ಯೆಗಳು ಯಾವುದೇ ಇರಲಿ ಅವುಗಳನ್ನು ನಿರ್ವಹಿಸುವ ಸಾಮರ್ಥ್ಯ ನಿಮಗಿರುವುದರಿಂದ ಅವುಗಳ ಬಗ್ಗೆ ಚಿಂತೆಬೇಡ. ಬ್ಯಾಂಕ್ ಉನ್ನತಾಧಿಕಾರಿಗಳಿಗೆ ತಮ್ಮದಲ್ಲದ ತಪ್ಪಿನಿಂದಾಗಿ ವಿಚಾರಣೆ ಎದುರಿಸಬೇಕಾಗಬಹುದು, ಮಕ್ಕಳ ವಿದ್ಯಾಭ್ಯಾಸದ ಚಿಂತೆಬೇಡ. ವಿದ್ಯಾರ್ಥಿಗಳು ಶ್ರಮಪಟ್ಟಲ್ಲಿ ಮಾತ್ರ ಉತ್ತಮ ಫಲಿತಾಂಶ ಕಾಣಲು ಸಾಧ್ಯ. ಜೊತೆಗೆ ತುಸು ತಾಳ್ಮೆಯಿಂದ ಅವರೊಂದಿಗೆ ನಡೆದುಕೊಳ್ಳಿ. ಹೀಗಾದಲ್ಲಿ ಮಾತ್ರ ಸಹಮತ ಮೂಡಲಿದೆ. ಸೋಮ -ಮಂಗಳ -ಬುಧ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಈ ವಾರ ಹಣಕಾಸಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆ, ಪ್ರತಿಯೊಂದಕ್ಕೂ ಮೊಂಡುತನ ಮಾಡುವುದರಿಂದ ಆಗಬೇಕಾದ ಕೆಲಸಗಳು ಕುಂಠಿತಗೊಳ್ಳಬಹುದು. ಹಳೇ ಸಾಲಗಳು ವಸೂಲಾಗಿ ವ್ಯವಹಾರದಲ್ಲಿ ಉತ್ಸಾಹ ಮೂಡುವುದು. ಕೆಲವರು ವಿಷಯಗಳನ್ನೇ ತಿಳಿಯದೇ ಆಡುವ ನಿಂದನಾತ್ಮಕ ಕಠೋರ ಮಾತುಗಳನ್ನು ಕೇಳದೆ ವಿಧಿಯಿಲ್ಲ. ಹಾಗೆಂದ ಮಾತ್ರಕ್ಕೆ ಮೌನವಾಗಿರದೇ ತಕ್ಕ ಸಮಯದಲ್ಲಿ ತಕ್ಕ ಉತ್ತರ ಕೊಡುವುದನ್ನು ಮರೆಯಬೇಡಿ. ಕೌಟುಂಬಿಕ ವಿಚಾರಗಳ ಬಗ್ಗೆ ಅವಸರದ ನಿರ್ಧಾರಬೇಡ. ಪಾಲುದಾರರ ಸಲಹೆಗಳು ವ್ಯವಹಾರಗಳನ್ನು ಲಾಭದ ಕಡೆ ಸಾಗಲು ಸಹಾಯ ಮಾಡಲಿವೆ. ಮತ್ತೊಬ್ಬರ ಕಷ್ಟಕ್ಕೆ ನೆರವಾಗಲು ಹೋಗಿ ನೀವು ತೊಂದರೆಗೆ ಸಿಲುಕುವ ಸಂದರ್ಭ. ಸೋಮ -ಬುಧ -ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಅನವಶ್ಯಕ ವ್ಯವಹಾರದಲ್ಲಿ ತೊಡಗುವುದರಿಂದ ಆರ್ಥಿಕ ನಷ್ಟದೊಂದಿಗೆ ಅವಮಾನವೂ ಆಗಬಹುದು. ಅಷ್ಟು ಮಾತ್ರವಲ್ಲದೇ, ಆಪಾದನೆಗಳನ್ನು ಎದುರಿಸಬೇಕಾದೀತು. ಕೆಲವರಿಗೆ ಹವ್ಯಾಸವೇ ವೃತ್ತಿಯಾಗಿ ಪರಿಣಮಿಸಿ, ನಿರ್ದಿಷ್ಟ ಆದಾಯವೂ ದೊರೆಯುವುದು. ವೃತ್ತಿ ನಿಮಿತ್ತವಾಗಿ ಪ್ರಯಾಣ ಅನಿವಾರ್ಯವಾಗಲಿದ್ದು, ಉಪಯುಕ್ತ ವಸ್ತುಗಳು ಕಳೆದುಹೋಗಬಹುದು. ಈ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ. ಸಗಟು ವ್ಯಾಪಾರಿಗಳಿಗೆ ಭರ್ಜರಿ ವಹಿವಾಟು ನಡೆಯಲಿದೆ. ಆರ್ಥಿಕ ಮೂಲವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ, ಯಶಸ್ವಿಯಾಗುವಿರಿ. ಗುರು-ಹಿರಿಯರನ್ನು ಗೌರವಿಸಿರಿ. ಕುಲದೇವತಾರಾಧನೆ ಮಾಡಿ. ಭಾನು -ಮಂಗಳ -ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಸಿನಿಮಾ ಕಲಾವಿದರು ತಮ್ಮ ವ್ಯಕ್ತಿತ್ವದಿಂದ ಅಭಿಮಾನಿಗಳನ್ನು ಆಕರ್ಷಿಸಲು ಹಲವು ರೀತಿಯಲ್ಲಿ ಯತ್ನಿಸುವರು. ಆರಂಭಿಸಿರುವ ಉದ್ಯಮದಲ್ಲಿ ಯಶಸ್ವಿಯಾಗಲು ಹೆಚ್ಚಿನ ಶ್ರಮ ಅನಿವಾರ್ಯ, ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ಮುನ್ನಡೆಯಿರಿ. ನಿರುದ್ಯೋಗಿ ಮಗನಿಗೆ ಉತ್ತಮ ನೌಕರಿ, ವಹಿಸಿಕೊಂಡ ಜವಾಬ್ದಾರಿಗಳನ್ನು ಮುತುವರ್ಜಿಯೊಂದಿಗೆ ನಿಭಾಯಿಸುವಿರಿ. ನಿಶ್ಚಿತ ಯೋಜನೆಗಳು ರಾಜಕಾರಣಿಗಳ ಬೆಂಬಲದಿಂದ ಕೈಗೂಡಲಿವೆ. ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ ನಿಮಗೆ, ಗೌರವ ಹೆಚ್ಚಿ, ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನವಾಗಲಿದೆ. ಮತ್ತೊಬ್ಬರೊಂದಿಗೆ ವ್ಯವಹರಿಸುವಾಗ, ಎಲ್ಲವೂ ಇತಿಮಿತಿಯಲ್ಲಿರುವುದು ಲೇಸು. ಬುಧ -ಗುರು -ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸಹೋದ್ಯೋಗಿಗಳೊಂದಿಗೆ ದ್ವೇಷವನ್ನು ಸಾಧಿಸಲು ಹೋಗಬೇಡಿ. ವಿದ್ಯಾರ್ಥಿಗಳು ಹೆಚ್ಚಿನ ಶ್ರಮಪಡದೇ ವಿಧಿಯಿಲ್ಲ. ಗೃಹ ಸದಸ್ಯರೊಂದಿಗೆ ವಿನಾಕಾರಣ ಮನಸ್ತಾಪ ಕಟ್ಟಿಕೊಳ್ಳಬೇಡಿ. ಮೇಲಾಧಿಕಾರಿಗಳು ಕಾಣದ ವ್ಯಕ್ತಿಗಳ ಚಿತಾವಣೆಯಿಂದಾಗಿ, ಆದಾಯ ತೆರಿಗೆ ಅಥವಾ ಜಾರಿ ನಿರ್ದೇಶನಾಧಿಕಾರಿಗಳ ತಪಾಸಣೆಗೆ ಒಳಗಾಗಬಹುದು. ಈ ವಿಷಯದಲ್ಲಿ ಉದಾಸೀನತೆ ಸಲ್ಲದು. ಮಕ್ಕಳ ಓದಿನ ಚಿಂತೆಯಿಂದ ಈ ವಾರ ಮುಕ್ತರಾಗುವಿರಿ. ಮಹಿಳೆಯರ ಕೋರಿಕೆಗಳು ಅನಾಯಾಸವಾಗಿ ನೆರವೇರಲಿವೆ. ತಾಯಿಯವರ ಆರೋಗ್ಯದಲ್ಲಿ ವ್ಯತ್ಯಾಸ, ಸೋಮ -ಶುಕ್ರ -ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಸ್ವಂತ ಉದ್ಯಮ ಆರಂಭಿಸುವವರು ಚಿಂತಿಸದೆ ಮುನ್ನಡೆಯಿರಿ, ಪ್ರತಿಸ್ಪರ್ಧಿಗಳನ್ನು ಜಾಣತನದಿಂದ ಮಣಿಸುವುದನ್ನು ಕಲಿಯಿರಿ. ನಿಶ್ಚಿತ ಕಾರ್ಯ ಯೋಜನೆಗಳು ಪ್ರಭಾವಿ ವ್ಯಕ್ತಿಗಳ ಸಹಕಾರದಿಂದ ಕೈಗೂಡಲಿವೆ. ಆಸ್ತಿ ಖರೀದಿಗಿರುವ ಕಾನೂನಿನ ಅಡಚಣೆಗಳು ದೂರವಾಗಲಿವೆ. ಅಧಿಕಾರಿಗಳೊಬ್ಬರು ನಿಮ್ಮೊಂದಿಗೆ ವ್ಯವಹಾರದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರುವರು. ನಿಶ್ಚಿತಾದಾಯವಿರುವುದರಿಂದ ಹಣಕಾಸಿನ ತೊಂದರೆಯಿಲ್ಲ. ಮನೆಯಲ್ಲಿ ಹಿರಿಯರ ಕೋರಿಕೆಗಳನ್ನು ಸಾಧ್ಯವಾದಷ್ಟು ಪೂರೈಸಲು ಪ್ರಯತ್ನಿಸಿ. ವೈಯಕ್ತಿಕ ಆರೋಗ್ಯದ ಬಗ್ಗೆ ಅಲಕ್ಷೆಬೇಡ. ಭಾನು -ಮಂಗಳ -ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅನಿಶ್ಚಿತತೆಯಲ್ಲಿ ನಡೆಯುತ್ತಿರುವ ವ್ಯಾಪಾರಕ್ಕೆ ಸೋದರರ ಸಂಪೂರ್ಣ ಬೆಂಬಲ. ದೂರದೂರಿನ ಪ್ರಯಾಣಗಳಿಗೆ ಪೂರ್ವಸಿದ್ಧತೆ ಚೆನ್ನಾಗಿರಲಿ. ಹಿರಿಯರ ಆಣತಿಯಂತೆ ಮನೆಯಲ್ಲಿ ಶುಭ ಸಮಾರಂಭಗಳು ವಿಜೃಂಭಣೆಯಿಂದ ನೆರವೇರಲಿವೆ. ಉನ್ನತ ಕೈಗಾರಿಕೋದ್ಯಮಿಗಳು ಆಗುಹೋಗುಗಳ ಬಗ್ಗೆ, ಪರಿಣಿತರಿಂದ ಹೆಚ್ಚಿನ ಸಲಹೆ, ಸೂಚನೆಗಳನ್ನು ಪಡೆಯಿರಿ. ಕಾರ್ಮಿಕರ ಕನಿಷ್ಠ ಕೋರಿಕೆಗಳನ್ನು ಈಡೇರಿಸಲು ಪ್ರಯತ್ನಿಸಿ. ಕುಟುಂಬದಲ್ಲಿ ಕೆಲವು ಆತಂಕದ ಕ್ಷಣಗಳು ಎದುರಾಗಬಹುದು, ಸಮಚಿತ್ತದಿಂದಿದ್ದಲ್ಲಿ ಮಾತ್ರ ಎಲ್ಲವೂ ಸರಿಹೋಗಲಿದೆ. ಹಣಕಾಸಿನ ವಿಚಾರದಲ್ಲಿ ಸಾಕಷ್ಟು ಹಿಡಿತ ಸಾಧಿಸುವುದು ಮೇಲು, ಗೋ ಸೇವೆ ಮಾಡಿ. ಸೋಮ -ಬುಧ -ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಹತ್ತು ಹಲವು ಕೆಲಸಗಳನ್ನು ನಿಭಾಯಿಸಬಲ್ಲೇ ಎಂಬ ಹುಚ್ಚು ಭ್ರಮೆಯಿಂದ ಹೊರಬನ್ನಿ, ಹರಿತವಾದ ಆಯುಧಗಳಿಂದ ದೂರವಿರಿ, ಈ ಹಿಂದೆ ಕೊಟ್ಟ ಸಾಲಗಳು ಮರಳಿ ಬರಲಿವೆ. ಹೊಸಮನೆ ಕೊಳ್ಳುವುದಕ್ಕೆ ಸಾಕಷ್ಟು ನೆರವು, ಸಂಗೀತ ಕಲಾವಿದರ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ, ನಿಮ್ಮ ಅಗತ್ಯಗಳನ್ನು ಪೂರೈಸಲು ಸಾಕಷ್ಟು ಹಣದ ಹರಿವು ಇರುತ್ತದೆ. ಕರಕುಶಲ ವಸ್ತುಗಳ ಮಾರಾಟ ಭರ್ಜರಿಯಾಗಿಯೇ ನಡೆದರೂ, ಲಾಭ ಮಾತ್ರ ಅಷ್ಟಕ್ಕಷ್ಟೆ. ಅಧ್ಯಾಪಕ ವೃತ್ತಿಯಲ್ಲಿರುವವರಿಗೆ, ವೇತನದಲ್ಲಿ ಹೆಚ್ಚಳ, ಹಿರಿಯರ ಆರೋಗ್ಯದ ಬಗ್ಗೆ ಕಾಳಜಿಯಿರಲಿ. ಬುಧ -ಗುರು ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮನೆತನದ ಹಿತದಿಂದ ಹಿರಿಯರು ತೆಗೆದುಕೊಳ್ಳುವ ನಿರ್ಧಾರಗಳು ಸರಿಯಾಗಿಯೇ ಇರುತ್ತವೆ. ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಆಸಕ್ತಿ ತೋರುವರು. ಯುವ ಪ್ರೇಮಿಗಳು ದೂರವಾಗುವ ಸಂಭವವಿದೆ. ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವವರಿಗೆ ಸಹಕಾರ ದೊರೆಯಲಿದೆ. ತೀರ್ಥ ಕ್ಷೇತ್ರಗಳ ಸಂದರ್ಶನ ಪುಣ್ಯದಾಯಕವಾಲಿದ್ದು, ಜೊತೆಗೆ ಮನಸ್ಸಿಗೆ ನೆಮ್ಮದಿ ತರಲಿದೆ. ಊಟೋಪಚಾರದಲ್ಲಿ ಅಲಕ್ಷೆ ಸಲ್ಲದು. ಆರ್ಥಿಕ ಪರಿಸ್ಥಿತಿ ಎಷ್ಟೇ ಏರುಪೇರಾದರೂ, ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಗುರು -ಶುಕ್ರ -ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮಹಿಳೆಯರಿಗೆ ಇಷ್ಟಾರ್ಥವು ಕೈಗೂಡಲಿದೆ. ಹಳೆಯ ಪ್ರಕರಣವೊಂದು ಮರುವಿಚಾರಣೆಗೆ ಬಂದು, ಕೋರ್ಟ್-ಕಛೇರಿಯೆಂದು ಅಲೆದಾಡಬೇಕಾದೀತು. ಜೊತೆಗೆ ಶಿಸ್ತಿನ ಕ್ರಮಕ್ಕೆ ಗುರಿಯಾಗುವ, ಸಂಭವವಿದೆ. ನೆರೆಹೊರೆಯವರೊಂದಿಗೆ ವಿನಾಕಾರಣ ನಿಷ್ಠೂರವಾಗುವ ಸನ್ನಿವೇಶಗಳು ಎದುರಾಗಬಹುದು. ಧಾರ್ಮಿಕ ಸಂಸ್ಥೆ ಅಥವಾ ದೇವಾಲಯಗಳ ಮುಖ್ಯಸ್ಥರಿಗೆ, ಸಾರ್ವಜನಿಕ ಕಿರುಕುಳ, ವ್ಯಾಪಾರಿಗಳು ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸದೇ ಹೋದಲ್ಲಿ ತೆರಿಗೆ ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಬೇಕಾದೀತು. ಶೀತ ಸಂಬಂಧಿ ಅನಾರೋಗ್ಯ ಬಾಧಿಸಲಿದೆ. ಗುರುಗಳ ಸೇವೆ ಮಾಡಿರಿ. ಸೋಮ ಮಂಗಳ -ಗುರು -ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ :- 16.11.2021ರ ಮಂಗಳವಾರ ಉತ್ಥಾನ ದ್ವಾದಶೀ, ತುಳಸೀ ವಿವಾಹ . ಚಾತುರ್ಮಾಸ ಮುಕ್ತಾಯ.**
**ದಿನಾಂಕ : 18.11.2021 ಗುರುವಾರ ವೈಕುಂಠ ಚತುರ್ದಶೀ,**
**ದಿನಾಂಕ : 20. 11 2021 ಶನಿವಾರ, ಗೌರಿ ಹುಣ್ಣಿಮೆ, ಕಾರ್ತಿಕ ಸ್ನಾನ ಸಮಾಪ್ತಿ.**

# ಶೇಕನ್ ಬೇಬಿ ಸಿಂಡ್ರೋಮ್



ಮಕ್ಕಳು ಪೋಷಕರ ತೋಳಿನ ತೂಗುಯ್ಯಾಲೆಯಲ್ಲಿ ತೂಗಿ ಅನುಭವಿಸುವ ಕಂಪನದ ಮಹದಾನಂದವನ್ನು ಅವರೊಂದಿಗೆ ಒಡನಾಡುವ ಪ್ರತಿಯೊಬ್ಬರೂ ಬಲ್ಲರು. ಆದರೆ, ಅತಿ ರಂಜಿತವಾದ ಮಗುವಿನ ತಲೆಯ ತೂಗಾಟ ಪ್ರಾಣಾಪಾಯಕ್ಕೂ ಕಾರಣವಾಗಬಹುದೆಂಬ ಸತ್ಯ ಅನೇಕರಿಗೆ ತಿಳಿದಿಲ್ಲ !

ಸಾಮಾನ್ಯವಾಗಿ ಶಿಶುಗಳ ಕುತ್ತಿಗೆಯ ಸ್ನಾಯುಗಳು ತುಂಬಾ ದುರ್ಬಲವಾಗಿರುತ್ತವೆ ಮತ್ತು ಅವರ ಮೆದುಳಿನ ಬೆಳವಣಿಗೆ ಪೂರ್ತಿಯಾಗಿ ಆಗಿರುವುದಿಲ್ಲ. ಮೆದುಳಿನ ಪೂರ್ಣ ಪ್ರಮಾಣದ ಬೆಳವಣಿಗೆಗೆ ಹೆಚ್ಚಿನ ಜಾಗದ ಅವಶ್ಯಕತೆ ಇರುವುದರಿಂದ ದೇಹದ ಅಳತೆಗೆ ಹೋಲಿಸಿದರೆ, ಮಕ್ಕಳು ಹೆಚ್ಚು ದೊಡ್ಡದಾದ ಮತ್ತು ಭಾರವಾದ ತಲೆಯನ್ನು ಹೊಂದಿರುತ್ತಾರೆ. ಆಗ ಸ್ವಾಭಾವಿಕವಾಗಿ ದೊಡ್ಡ ತಲೆಬುರುಡೆ ಮತ್ತು ಚಿಕ್ಕ ಮೆದುಳಿನ ಮಧ್ಯ ಸ್ಥಳಾವಕಾಶವಿರುತ್ತದೆ. ಬಲತ್ಕಾರವಾಗಿ ಮಗುವಿನ ತಲೆಯನ್ನು ರಭಸವಾಗಿ ಅಲುಗಾಡಿಸುವುದರಿಂದ, ಮೃದುವಾದ ಮೆದುಳು ಗಟ್ಟಿಯಾದ ತಲೆಬುರುಡೆಯಲ್ಲಿ ಸರಿದಾಡುತ್ತದೆ. ಆಗ ಉಂಟಾಗುವ ಘರ್ಷಣೆಯಿಂದ ಮತ್ತು ಹೆಚ್ಚಿದ ಆಂತರಿಕ ಒತ್ತಡದಿಂದ ಮೆದುಳು ಘಾಸಿಗೊಂಡು ಊದಿಕೊಳ್ಳುತ್ತದೆ ಮತ್ತು ಅದಕ್ಕೆ ಪೂರೈಕೆಯಾಗುವ ರಕ್ತನಾಳಗಳಿಗೂ ತೊಂದರೆಯಾಗಿ, ಸೂಕ್ಷ್ಮವಾದ ಅಂಗಾಂಶಗಳಿಗೆ ಹಾನಿಯುಂಟಾಗುತ್ತದೆ. ಕೆಲವೊಂದು ವೇಳೆ ಈ ಆಘಾತ ಎಷ್ಟು ತೀವ್ರವಾಗಿರುತ್ತದೆಯೆಂದರೆ, ಮೋಟಾರು ವಾಹನ ಅಪಘಾತಗಳಲ್ಲಿ ತಲೆಗೆ ಆಗುವ ಹಾನಿಗೆ ಸಮಾನಾಗಿರುತ್ತದೆ. ಈ ತೊಂದರೆಗೆ ಸಿಲುಕುವ ಮಕ್ಕಳ ವಯಸ್ಸು ಕೆಲವು ದಿನಗಳಿಂದ ತಿಂಗಳುಗಳಾಗಿರುತ್ತದೆ. ಹೆಚ್ಚಾಗಿ 6 ತಿಂಗಳ ಒಳಗಿನ ವಯೋಮಾನದ ಮಕ್ಕಳು 'ಶೇಕನ್ ಬೇಬಿ ಸಿಂಡ್ರೋಮ್'ಗೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಮಕ್ಕಳಲ್ಲಿ ಹಸಿವು ಕಡಿಮೆಯಾಗಿ ಆಹಾರ ಸೇವಿಸದೇ ಇರುವುದು, ವಾಂತಿಯಾಗುವುದು, ಚಟುವಟಿಕೆಗಳು ಕಡಿಮೆಯಾಗಿ ಆಲಸ್ಯದಿಂದ ಕೂಡಿರುವುದು, ಹಠ ಮಾಡುವುದು, ದೇಹದ ಸಮತೋಲನತೆಯಲ್ಲಿ ವ್ಯತ್ಯಯ ಕಾಣುವುದು, ಅಪಸ್ಮಾರಕ್ಕೆ (ಸೆಟೆಬೇನೆ/ಮೂರ್ಛೆರೋಗ) ಒಳಗಾಗುವುದು, ಉಸಿರಾಡಲು ಕಷ್ಟ ಪಡುವುದು, ಚರ್ಮದ ಬಣ್ಣ ಪೇಲವವಾಗುವುದು ಇಲ್ಲವೇ ನೀಲಿ ಬಣ್ಣಕ್ಕೆ ತಿರುಗುವುದು, ದೃಷ್ಟಿ ಹೀನತೆ ಉಂಟಾಗುವುದು ಈ ರೋಗದ ಮುಖ್ಯ ಲಕ್ಷಣಗಳು. ತೀವ್ರವಾಗಿ ಘಾಸಿಗೊಂಡ ಮಕ್ಕಳಲ್ಲಿ ಈ ಲಕ್ಷಣಗಳು 5 ಸೆಕೆಂಡ್‌ಗಳ ಒಳಗೆ ಕಂಡು ಬರುತ್ತವೆ. ಇನ್ನುಳಿದಂತೆ ಮೆದುಳಿನ ತೊಂದರೆಗಳ ತೋರ್ಪಡಿಸುವಿಕೆಗೆ ಕೆಲವು ದಿನಗಳೇ ಬೇಕಾಗುತ್ತದೆ. ಆಸಕ್ತಿಕರ ವಿಷಯವೆಂದರೆ, ಕೆಲವೊಮ್ಮೆ ವೈದ್ಯರಿಗೂ ಕೂಡಾ ಈ ರೋಗದ ಲಕ್ಷಣಗಳನ್ನು ಗುರುತಿಸುವುದು ಸುಲಭ ಸಾಧ್ಯವಲ್ಲ. ಏಕೆಂದರೆ, ಅನೇಕ ಸಲ ಸ್ಪಷ್ಟತೆ ಇಲ್ಲದೇ ಇರುವುದು ಮತ್ತು ವಿಷಮಶೀತ ಜ್ವರ ಅಥವಾ ಮೆದುಳು ಜ್ವರಕ್ಕೆ ಸಂಬಂಧಿಸಿದ ಲಕ್ಷಣಗಳನ್ನು ಹೋಲುವುದೇ ಅದಕ್ಕೆ ಕಾರಣವಾಗಿರುತ್ತದೆ. ಯಾವುದೇ ವೈದ್ಯಕೀಯ ತೊಂದರೆಯ ಇತಿಹಾಸವಿರದ, ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಸ್ಕ್ಯಾನಿಂಗ್‌ನಲ್ಲಿ ಮೆದುಳಿನ ಊತ ಮತ್ತು ಕಣ್ಣಿನ ರೆಟಿನಾ ಭಾಗದಲ್ಲಿ ರಕ್ತಸ್ರಾವ ಕಂಡು ಬರುವುದು. 'ಶೇಕನ್ ಬೇಬಿ ಸಿಂಡ್ರೋಮ್'ನ ಮುಖ್ಯ ಚಿಹ್ನೆಗಳು.

ಈ ತೊಂದರೆಯಿಂದ ಬಳಲಿದ ನಾಲ್ಕು ಮಕ್ಕಳಲ್ಲಿ ಒಂದು ಮಗು ಸಾವಿಗೀಡಾಗುತ್ತದೆ. ಬದುಕಿ ಉಳಿಯುವ ಮಕ್ಕಳು, ಜೀವನಪರ್ಯಂತ ದೃಷ್ಟಿ ಹೀನತೆ ಮತ್ತು ಮೆದುಳಿನ ತೊಂದರೆಗಳಿಂದ ಬಳಲಬಹುದು. ಅವರು ಆಗಾಗ ಅಪಸ್ಮಾರಕ್ಕೆ ಒಳಗಾಗುವುದರಿಂದ, ಆಗ ಉಂಟಾಗುವ ಅನಿಯಂತ್ರಿತ ಸ್ನಾಯು ಚಲನೆ ಮತ್ತು ಸ್ನಾಯು ಸೆಟೆತಗಳು ಬಿಗಿ ಮತ್ತು ಅಡ್ಡಾದಿಡ್ಡಿ ಕೈಕಾಲಿನ ಚಲನೆಗಳನ್ನು ಹೆಚ್ಚಾಗಿಸಿ, ತೀವ್ರತರವಾದ ಭೌತಿಕ ಅಪಘಾತಗಳಿಗೆ ಒಳಗಾಗುವ ಅವಕಾಶಗಳು ಹೆಚ್ಚಾಗಿರುತ್ತವೆ. ಬೆಳವಣಿಗೆಯ ಮೈಲುಗಲ್ಲುಗಳಾದ ಮಾತು, ನಡೆ - ನುಡಿಗಳ ಕಲಿಯುವಿಕೆಯಲ್ಲಿ ಹಿಂದುಳಿಯುವುದರಿಂದ, ಇತರರೊಂದಿಗೆ ಸಂವಹನ ನಡೆಸುವಲ್ಲಿ ಈ ಮಕ್ಕಳು ವಿಫಲರಾಗುತ್ತಾರೆ. ಹೀಗೆ ಸಮಾಜದಲ್ಲಿ ಅವರ ಭವಿಷ್ಯ ತ್ರಿಶಂಕುವಾಗುವುದರಿಂದ, ಮಕ್ಕಳ ಜೊತೆಗೆ ಅವರ ಕುಟುಂಬವೂ ಕೂಡಾ ನೋವು ಅನುಭವಿಸಬೇಕಾಗುತ್ತದೆ.

ಬಹುತೇಕ ಪರಿಸ್ಥಿತಿಗಳಲ್ಲಿ ಮಗುವಿಗೆ ಹಾನಿಯುಂಟು ಮಾಡುವ ಉದ್ದೇಶವಿಲ್ಲದಿದ್ದರೂ, ತಾಳ್ಮೆ ಕಳೆದುಕೊಂಡು ಕೋಪಗೊಂಡ ಪೋಷಕರು ಅಥವಾ ಮಕ್ಕಳ ಪಾಲಕರು, ಹಠ ಮಾಡಿಕೊಂಡು ಜೋರಾಗಿ ಅಳುತ್ತಿರುವ ಮಗುವನ್ನು ಸಮಾಧಾನಪಡಿಸಲೋ, ಇಲ್ಲವೇ ಗಮನವನ್ನು ಬೇರೆಡೆಗೆ ಸೆಳೆಯಲೋ ಅಥವಾ ಶಿಕ್ಷಿಸಲೋ ತಲೆಯನ್ನು ರಭಸವಾಗಿ ಅಲುಗಾಡಿಸುವಾಗ ಮತ್ತು ಅದರ ತೀವ್ರತೆ ಅತಿಯಾದಾಗ ಈ ರೀತಿಯ ಘಟನೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದರೆ, ಮಗುವನ್ನು ಗಾಳಿಯಲ್ಲಿ ಮೃದುವಾಗಿ ಚಿಮ್ಮುವುದರಿಂದ, ತಮಾಷೆಯಾಗಿ ತೂಗುವುದರಿಂದ ಅಥವಾ ಅಲ್ಲಾಡಿಸುವುದರಿಂದ, ಬಾಲ್ಯದಲ್ಲಿ ಸಾಮಾನ್ಯವಾಗಿ ಆಗುವ ಸಣ್ಣ - ಪುಟ್ಟ ಅಪಘಾತಗಳಿಂದ (ಉದಾ:- ಕುರ್ಚಿಯಿಂದ ಕೆಳಗೆ ಬೀಳುವುದು, ಆಕಸ್ಮಿಕವಾಗಿ ಪೋಷಕರ ತೋಳಿನಿಂದ ಜಾರಿ ಬೀಳುವುದು ಇತ್ಯಾದಿಗಳಿಂದ) ಉಂಟಾಗುವ ಅವಕಾಶವಿರುವುದಿಲ್ಲ. ಅನೇಕ ಸಲ ರೋಗದ ಲಕ್ಷಣಗಳು ಕಂಡಾಗ ಪೋಷಕರು, ವಿಶ್ರಾಂತಿಯಿಂದ ದೇಹಸ್ಥಿತಿಯಲ್ಲಿ ಸುಧಾರಣೆ ಕಂಡು ಬರಬಹುದೆಂದು ಭಾವಿಸಿ, ಮಗುವನ್ನು ಮಲಗಿಸುತ್ತಾರೆ. ಈ ರೀತಿಯ ಸಮಯ ವಿಳಂಬದಿಂದ ಕೆಲವೊಮ್ಮೆ ವೈದ್ಯರ ಬಳಿ ಕರೆದೊಯ್ಯುವ ವೇಳೆಗೆ ಎಚ್ಚರ ಕಳೆದುಕೊಂಡು ಕೋಮಾ ಸ್ಥಿತಿಗೆ ತಲುಪುವುದರಿಂದ ತೀವ್ರ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡಬೇಕಾಗುತ್ತದೆ.

'ರೋಗಗಳನ್ನು ತಡೆಗಟ್ಟಲು ತೆಗೆದುಕೊಳ್ಳುವ ಚಿಟಿಕೆ ಕಾಳಜಿಯು ಮಣದಷ್ಟು ಚಿಕಿತ್ಸೆಗಿಂತ ಹೆಚ್ಚು ಪರಿಣಾಮಕಾರಿ' ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಈ ಮಾತಿನಂತೆ ಮನೆಯಲ್ಲಿ ಅಥವಾ ಪಾಲನಾ ಕೇಂದ್ರಗಳಲ್ಲಿ ಪೋಷಕರು ಮಕ್ಕಳ ಲಾಲನೆ - ಪಾಲನೆಯಲ್ಲಿ ತೆಗೆದುಕೊಳ್ಳಬೇಕಾದ ಸೂಕ್ಷ್ಮತೆಯನ್ನು ಅರಿತು ಕಾಳಜಿ ವಹಿಸಿದರೆ ಮತ್ತು ಅವರ ದೇಹಸ್ಥಿಯಲ್ಲಿ ಕಂಡು ಬರುವ ಬದಲಾವಣೆಗಳನ್ನು ಗಮನಿಸಿ, ಶೀಘ್ರವಾಗಿ ವೈದ್ಯರ ತಪಾಸಣೆಗೆ ಒಳಪಡಿಸಿ, ಅವರ ಸಲಹೆ ಸೂಚನೆಗಳನ್ನು ಪಾಲಿಸುವುದರಿಂದ ಮಕ್ಕಳ ಜೀವನವನ್ನು ಶಾಶ್ವತವಾಗಿ ಅಂಧಕಾರಕ್ಕೆ ತಳ್ಳುವುದನ್ನು ತಪ್ಪಿಸಿ, ಕುಟುಂಬದ ಸುಖ, ಸಂತೋಷಗಳನ್ನು ವೃದ್ಧಿಗೊಳಿಸಬಹುದು.



**- ಡಾ|| ಸಂಜನ ಎಸ್.**
sanjanasg@gmail.com
ಮಾರ್ಗದರ್ಶನ :
**- ಡಾ|| ಎಸ್.ಎನ್. ಸೋಮಶೇಖರ್**
ಶಸ್ತ್ರ ಚಿಕಿತ್ಸಾ ತಜ್ಞರು
ಬಾಪೂಜಿ ಆಸ್ಪತ್ರೆ, ದಾವಣಗೆರೆ.

## ಮಕ್ಕಳ ದಿನಾಚರಣೆ

ಇಂದು ಮಕ್ಕಳ ದಿನಾಚರಣೆ
ಮುದ್ದು ಮಕ್ಕಳ ಹಬ್ಬದಾಚರಣೆ
ಚಾಚಾ ನೆಹರು ಜನುಮದಿನ
ಆಧುನಿಕ ಭಾರತ ಶಿಲ್ಪಿಯ ದಿನ

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು
ಎಂದೂ ಅವರೇ ದೇಶದ ಶಿಲ್ಪಿಗಳು
ಬದಲಾಗುವ ಸಮಾಜದ ಕೊಡುಗೆಗಳು
ಮೊದಲ ಪ್ರಧಾನಿಯ ಗುಲಾಬಿ ಹೂಗಳು

ಶಾಂತಿದೂತ ನೆಹರೂರವರು
ಪ್ರೀತಿ ಮಮತೆಯ ಮಹಾಪೂರ
ಭಾರತದ ಸ್ವಾತಂತ್ರ್ಯ ಹೋರಾಟಗಾರ
ಧೀಮಂತ ದಿಟ್ಟ ನಾಯಕರು

ಮಕ್ಕಳೆಂದರೆ ಅವರಿಗೆ ಬಲು ಇಷ್ಟ
ಅಕ್ಕರೆಯಲಿ ಅವರ ಕಂಡ ನಿಷ್ಠ
ಸ್ವರೂಪಾರಾಣಿ ಮೋತಿಲಾಲಾರ ಪುತ್ರ
ಭಾರತರತ್ನ ಪಂಡಿತ್ ಜವಾಹರಲಾಲ್ ನೆಹರು

**- ಕೋಮಲ ವಿ.ಕುಮಾರ್**, ದಾವಣಗೆರೆ.

## ಮುದ್ದು ಮಕ್ಕಳು...

ಬಾನಂಗಳದ ಗಾಳಿಪಟಕ್ಕೆ ರೆಕ್ಕೆಯ ಕಟ್ಟಿ
ಶಾಲಾಂಗಳದ ಧ್ವಜಕ್ಕೆ ಬಾವುಟವ ಕಟ್ಟಿ
ಭವಿಷ್ಯದಂಗಳದ ದಾರಿಯಲಿ ಕನಸು ಕಟ್ಟಿ
ದೇಶದಂಗಳದ ತಾರುಣ್ಯಕ್ಕೆ ಟೊಂಕ ಕಟ್ಟುವವರು
ಮುದ್ದು ಮಕ್ಕಳು.

ಮನೆಯಲ್ಲಿ ತಂದೆ-ತಾಯಿಗೆ ಶಕ್ತಿಯಾಗಿ
ಶಾಲೆಯಲ್ಲಿ ಗುರು-ಹಿರಿಯರಿಗೆ ಯುಕ್ತಿಯಾಗಿ
ಶುದ್ಧವಾದ ಮನಸ್ಸಿಗೆ ದೈವದ ಭಕ್ತಿಯಾಗಿ
ನವ ಭಾರತದ ಉದಯಕ್ಕೆ ಶ್ರಮದ
ವ್ಯಕ್ತಿಯಾಗಿರುವವರು ಮುದ್ದು ಮಕ್ಕಳು.

ಹೂದೋಟದಲ್ಲಿರುವ ಸುಂದರ ಮೊಗ್ಗುಗಳು
ಉದಯ ಸೂರ್ಯನ ಮುಂಜಾನೆಯ ಕಿರಣಗಳು
ಬಿತ್ತಿದ ಬೀಜದ ಮೊಳಕೆ ಒಡೆದ ಚಿಗುರುಗಳು
ಇಂದಿನ ಮಕ್ಕಳೇ ನಾಳಿನ ಭಾವೀ ಪ್ರಜೆಗಳು
ಮುದ್ದು ಮಕ್ಕಳು.

**- ಹರೀಶ್ ಎಂ ಆರ್**
ಕನ್ನಡ ಉಪನ್ಯಾಸಕರು
ರಾಘವೇಂದ್ರ ಕಾಲೇಜು, ದಾವಣಗೆರೆ.

# ಮತ ಚಲಾಯಿಸುವುದು ಒಂದು ಪವಿತ್ರ ಕಾರ್ಯ



**ಹರಪನಹಳ್ಳಿ**

ಹರಪನಹಳ್ಳಿ, ನ.13- 18 ವರ್ಷ ತುಂಬಿದ ಯುವಕರು, ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡಿಸಿ, ಎಂದು ಉಪನ್ಯಾಸಕ ನಾರಾಯಣ ಸ್ವಾಮಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಕಾಲೇಜಿನ ಎನ್‌ಎಸ್‌ಎಸ್ ಘಟಕ, ಸ್ಕೌಟ್ಸ್-ಗೈಡ್ಸ್ ಘಟಕ, ಸಾಂಸ್ಕೃತಿಕ ವಿಭಾಗ, ಸ್ವೀಪ್ ಸಮಿತಿ ಸದಸ್ಯರ ಸಹಯೋಗದಲ್ಲಿ 18 ತುಂಬಿದವರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡಿಸಿ ಎಂಬ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮತದಾನ ಒಂದು ವರದಾನವಾಗಿದ್ದು, ಮತ ಚಲಾಯಿಸುವುದು ಪವಿತ್ರ ಕಾರ್ಯವಾಗಿದೆ. 18 ವರ್ಷ ತುಂಬಿದ ಪ್ರತಿಯೊಬ್ಬ ಭಾರತೀಯ ಯುವಕರು, ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮತ ಚಲಾಯಿಸಿದಾಗ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳುತ್ತದೆ ಎಂದರು.

ಈ ವೇಳೆ ಉಪನ್ಯಾಸಕರಾದ ಸುರೇಶ್, ಜಿ.ಎಸ್. ವೆಂಕಟೇಶ್, ಬಿ. ಸುರೇಶ್, ಹೊನ್ನಪ್ಪ, ಹಾಲಪ್ಪ, ನಿಂಗಜ್ಜ ಬಣಕಾರ್, ಶ್ರೀನಾಥ್ ಇನ್ನಿತರರಿದ್ದರು.

# ಸಾಲಕಟ್ಟೆಯಲ್ಲಿ ನಾಳೆ ಕಳಸಾರೋಹಣ

ಹರಿಹರ, ನ.13- ತಾಲ್ಲೂಕಿನ ಸಾಲಕಟ್ಟೆ ಗ್ರಾಮದ ಶ್ರೀ ದುರ್ಗಾ ಪರಮೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮವು ನಾಡಿದ್ದು ದಿನಾಂಕ 15 ರ ಸೋಮವಾರ ನಡೆಯಲಿದೆ. ಸೋಮವಾರ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾಪೂಜೆ ಹಾಗೂ ಗಣಪತಿ ಪೂಜೆ ನೆರವೇರಿಸಲಾಗುವುದು. ನಂತರ ಬೆಳಗ್ಗೆ 9 ರಿಂದ 10.30 ಕ್ಕೆ ಶ್ರೀಮದ್ ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ ಡಾ. ಚೆನ್ನಸಿದ್ಧರಾಮ, ಪಂಡಿತಾರಾಧ್ಯ ಸ್ವಾಮೀಜಿ ಕಳಸಾರೋಹಣ ನೆರವೇರಿಸಲಿದ್ದಾರೆ ಎಂದು ಗ್ರಾಮದ ಮುಖಂಡರಾದ ಡಿ.ಎಂ. ಹಾಲಸ್ವಾಮಿ ತಿಳಿಸಿದ್ದಾರೆ.

# ಮಾದರಿ ವ್ಯಕ್ತಿತ್ವದ ಮಾನಿನಿ

ವಾಕ್ ಮಾಡುವ ಸಂದರ್ಭದಲ್ಲಿ ಎಂ.ಸಿ.ಸಿ 'ಬಿ' ಬ್ಲಾಕ್ ನಲ್ಲಿರುವ ಈಜು ಕೊಳದ ಪಾರ್ಕಿನಲ್ಲಿ ಒಂದು ಅಪರೂಪದ ದೃಶ್ಯ ಕಣ್ಣಿಗೆ ಬಿತ್ತು. ಅದೇನೆಂದರೆ ಒಬ್ಬ ಎಂಜಿನಿಯರಿಂಗ್ ಯುವತಿ ಸುಮಾರು ಹತ್ತಾರು ಬಡ ಮಕ್ಕಳನ್ನು ಕೂರಿಸಿಕೊಂಡು ಉಚಿತವಾಗಿ ಪಾಠ ಮಾಡುತ್ತಿದ್ದಳು. ಆಕೆಯ ಹೆಸರು ಸಹನ.

ಕುತೂಹಲದಿಂದ ಅವಳೊಂದಿಗೆ ಮಾತನಾಡಿದಾಗ, ಇವಳು ವೆಲ್ಲೂರಿನ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜ್‌ನಲ್ಲಿ ಮೆರಿಟ್ ಸೀಟ್ ಪಡೆದ ಪ್ರತಿಭಾವಂತ ವಿದ್ಯಾರ್ಥಿನಿ ಎಂದು ತಿಳಿಯಿತು. ಜೊತೆಗೆ ಅತ್ಯಂತ ಚಿಕ್ಕವಯಸ್ಸಿನಲ್ಲಿಯೇ ಗಾಂಧೀಜಿಯ ಆದರ್ಶಗಳನ್ನು ಅಳವಡಿಸಿಕೊಂಡವಳು ಎಂದು ಅರಿವಾಯಿತು. ಈಗ ಕಾಲೇಜುಗಳು ಆನ್ ಲೈನಲ್ಲೇ ನಡೆಯುತ್ತಿರುವುದರಿಂದ ಅದರಲ್ಲೇ ಬಿಡುವು ಮಾಡಿಕೊಂಡು ಈ ಮಕ್ಕಳಿಗೆ ಪಾಠ, ನೀತಿ, ಜೀವನ ಮೌಲ್ಯಗಳನ್ನು ಧಾರೆ ಎರೆಯುತ್ತಿದ್ದಾಳೆ.

ಸುಮಾರು ನಾಲ್ಕೈದು ತಿಂಗಳಿಂದ ಈ ರೀತಿ ಪಾಠ ಮಾಡುತ್ತಿರುವುದು ಮತ್ತು ಇದನ್ನು ಗಮನಿಸಿದ ಸಾರ್ವಜನಿಕರು ಆ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು, ಮಗ್ಗಿ ಪುಸ್ತಕಗಳು ಮುಂತಾದವುಗಳನ್ನು ನೀಡುತ್ತಿದ್ದಾರೆ. ಕರುಣಾ ಟ್ರಸ್ಟಿನ ವತಿಯಿಂದ ಈ ಮಕ್ಕಳ ಕಷ್ಟಕ್ಕೆ ಸ್ಪಂದಿಸಲು ನಿರ್ಧರಿಸಲಾಯಿತು. ಇವಳ ಬಡವರ ಬಗೆಗಿನ ಕಾಳಜಿಯ ಕಾರ್ಯವನ್ನು ನೋಡಿ ಹೃದಯ ತುಂಬಿ ಬಂತು. ಈಕೆ ಕರುಣಾಮಯಿ, ಸಮಾಜಮುಖಿ, ಜೀವಪರ ವ್ಯಕ್ತಿ ಎನಿಸಿತು. ಇವಳ ಭವಿಷ್ಯ ಉಜ್ವಲವಾಗಲಿ, ಇಂತವರ ಸಂತತಿ ಸಾವಿರ ಸಾವಿರವಾಗಲಿ.

ಸ್ವಲ್ಪವೂ ಬಿಡುವಿಲ್ಲದೆ ಹಣ ಗಳಿಸಬೇಕು ಎಂದು ಭೋಗಕ್ಕಾಗಿ ವೇಗದಲ್ಲಿ ಮುನ್ನುಗ್ಗುತ್ತಿರುವ ಪ್ರಸ್ತುತ ಪ್ರಪಂಚದಲ್ಲಿ, ತಾನು ಕಲಿತಿರುವ ವಿದ್ಯೆಯನ್ನು ಇನ್ನೊಬ್ಬರಿಗೆ ಹಂಚುವ ಈ ಹುಡುಗಿಯ ತ್ಯಾಗದ ಮಹತ್ಕಾರ್ಯ ಶ್ಲಾಘನೀಯ ಎನಿಸಿತು.

**ಶಿವನಕೆರೆ ಬಸವಲಿಂಗಪ್ಪ**
ಕರುಣಾ ಜೀವ ಕಲ್ಯಾಣ ಟ್ರಸ್ಟ್ (ರಿ), ದಾವಣಗೆರೆ.

# 'ಋಣ ಸ್ಮರಣ' ಹೊತ್ತಿಗೆ ಲೋಕಾರ್ಪಣೆ

**ನಗರದಲ್ಲಿ ಇಂದು**

ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟಸ್ಟ್‌ನ ವಿರೂಪಾಕ್ಷಪ್ಪ ಉಚಿತ ವಿದ್ಯಾರ್ಥಿ ನಿಲಯದಲ್ಲಿ 1985 ರಿಂದ ಉಚಿತ ಸೇವೆ ಪಡೆದ ಹಿರಿಯ ವಿದ್ಯಾರ್ಥಿಗಳು ತಮ್ಮ ಅಭಿಮಾನದ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ 'ಋಣ ಸ್ಮರಣ' ಸಂಚಿಕೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ರಂಗಮಹಲ್ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚನ್ನಗಿರಿ ಭರತ್ ತಿಳಿಸಿದ್ದಾರೆ.

ಡಾ. ನಾಗಮ್ಮ ಕೇಶವಮೂರ್ತಿ ಕಾರ್ಯ ಕ್ರಮ ಉದ್ಘಾಟಿಸಲಿದ್ದು, ಟ್ರಸ್ಟ್‌ನ ಅಧ್ಯಕ್ಷ ಸಿ.ಆರ್. ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಿ, 'ಋಣ ಸ್ಮರಣ' ಹೊತ್ತಿಗೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಪುಸ್ತಕದ ಆಯೋಜಕರು, ಪ್ರಧಾನ ಸಂಪಾದಕರೂ ಹಾಗೂ 80ರ ದಶಕದ ಈ ಹಾಸ್ಟೆಲ್‌ನ ಹಿರಿಯ ವಿದ್ಯಾರ್ಥಿಗಳಾದ ಡಾ. ಕೆ.ಎನ್. ವೆಂಕಟಕೃಷ್ಣರಾವ್, ಡಾ. ಗಜಾನನ ಶರ್ಮ ವೇದಿಕೆಯಲ್ಲಿ ಉಪಸ್ಥಿತರಿರುವರು ಎಂದು ಟ್ರಸ್ಟಿಗಳಾದ ಜೆ.ಎನ್. ವಸಂತಕುಮಾರ್, ಆರ್. ಆರ್. ರಮೇಶ್ ಬಾಬು, ಸಿ.ಆರ್. ಸತ್ಯನಾರಾಯಣ, ಸಿ.ಆರ್. ಕೃಷ್ಣಮೂರ್ತಿ, ಬಿ.ವಿ. ಗಂಗಪ್ಪ ಶೆಟ್ಟಿ, ಸಿ.ಕೆ. ಪ್ರಶಾಂತ್, ಸಿ.ಸಿ. ಬದರಿನಾಥ್ ಇನ್ನಿತರರು ತಿಳಿಸಿದ್ದಾರೆ.

# ಜಿ.ಎಂ. ಕಾಲೇಜಿನಲ್ಲಿ 'ವಿಜಾನಿಕ್ಸ್' ಫೋರಂ ಉದ್ಘಾಟನೆ



ದಾವಣಗೆರೆ, ನ.13- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದಲ್ಲಿ 'ವಿಜಾನಿಕ್ಸ್' ಫೋರಂ ಉದ್ಘಾಟಿಸಲಾಯಿತು.

ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಕಾಲೇಜು ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ, ವಿಭಾಗದ ಮುಖ್ಯಸ್ಥ ಹಾಗೂ ಫೋರಂ ಚೇರ್ಮನ್ ಡಾ. ಜೆ. ಪ್ರವೀಣ್ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ವಿಭಾಗದ ಅಧ್ಯಾಪಕರುಗಳು, ಫೋರಂನ ಸಂಯೋಜಕ ಸಿ.ವೈ. ವಿಕಾಸ್, ಅಕ್ಷತಾ ಚೌಹಾಣ್, ಹೆಚ್.ಬಿ. ಬಸವೇಶ್ವರ, ಫೋರಂ ಪ್ರತಿನಿಧಿಗಳಾದ ಎಂ. ನೂತನ, ಎ.ವಿ. ನಟರಾಜ್, ಪಿ. ನಿತಿನ್ ಇನ್ನಿತರರಿದ್ದರು.

# ಹರಪನಹಳ್ಳಿ : ಪುನೀತ್ ಸಾಮಾಜಿಕ ಕಳಕಳಿಯ ಧೀಮಂತ



ಹರಪನಹಳ್ಳಿ, ನ.13- ನಾಡು ಕಂಡ ಪ್ರತಿಭಾನ್ವಿತ ನಾಯಕ ನಟರಾಗಿದ್ದ ಪುನೀತ್ ರಾಜಕುಮಾರ್ ನಟನೆಯ ಜೊತೆಗೆ ಸಾಮಾಜಿಕ ಕಳಕಳಿ ಹೊಂದಿದ್ದರು ಎಂದು ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಆಲೂರು ಶ್ರೀನಿವಾಸ ಹೇಳಿದರು.

ಪಟ್ಟಣದ ಹಿರೇಕೇರಿ ವೃತ್ತದಲ್ಲಿ ಪುನೀತ್ ರಾಜಕುಮಾರ್ ಅವರ 16ನೇ ದಿನದ ಪುಣ್ಯ ಸ್ಮರಣೆ ಅಂಗವಾಗಿ ಅಭಿಮಾನಿ ಬಳಗದ ವತಿಯಿಂದ ಅನ್ನ ಸಂತರ್ಪಣೆ ಹಾಗೂ ದೀಪಾರಾಧನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪುನೀತ್ ರಾಜಕುಮಾರ್ ಹೆಸರಿನಲ್ಲಿ ನಾವು ಕೂಡ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತೇವೆ ಹಾಗೂ ಅನೇಕ ಸಾಮಾಜಮುಖಿ ಕೆಲಸಗಳನ್ನು ಮಾಡುವ ಗುರಿ ಇದೆ ಎಂದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ಮಾತನಾಡಿ, ಪುನೀತ್ ರಾಜಕುಮಾರ್ ಮನೆ - ಮನೆಯಲ್ಲೂ ಅಜರಾಮರರಾಗಿದ್ದಾರೆ. ಚಲನ ಚಿತ್ರ ನಟನೆಗೆ ಸಿಮೀತವಾಗದೆ, ಸಾಮಾಜಿಕ ಕಳಕಳಿಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಅರಿತು ಅವರ ಜೀವಿತಾವಧಿಯಲ್ಲಿ ಮಾಡಿದ ಕೆಲಸಗಳು ಸದಾ ಜೀವಂತವಾಗಿವೆ. ಅವರ ಸರಳತೆಯನ್ನು ಈಗಿನ ಯುವಕರು ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಮುಖಂಡರಾದ ಮೆಡಿಕಲ್ ತಿಮ್ಮಣ್ಣ, ಕಣವಿಹಳ್ಳಿ ಚಂದ್ರಶೇಖರ್, ಎಂ. ಸಂತೋಷ್, ಎಚ್.ವಾಗೀಶ್, ಎ. ನರಸಿಂಹ, ಎ. ಮಂಜುನಾಥ್, ಟಿ. ಹುಲಿಗೇಶ್, ಸಂತೋಷ್, ಟಿ ಮಂಜುನಾಥ, ಕೆ. ಸಂತೋಷ್, ಎಂ. ಕೊಟ್ರೇಶ್, ಕೂಲಹಳ್ಳಿ ಮಂಜುನಾಥ್, ನಿರಂಜನ, ಅಮಿತ್, ಬಿ. ಪಂಪಣ್ಣ ಇನ್ನಿತರರಿದ್ದರು.

**ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ 1ನೇ ನ್ಯಾಯಾಲಯ, ದಾವಣಗೆರೆ.**

**ಸಿ.ಆರ್.ಮಿಸ್ ನಂ. : 1174:2021**

**ಅರ್ಜಿದಾರರು : 1) ಎಂ.ಎಸ್. ಫಯಾಜ್ ಅಹಮ್ಮದ್ ಬಿನ್ ಎಂ.ಎನ್. ಸುಬಾನ್, ವಯಸ್ಸು ಸುಮಾರು 64 ವರ್ಷ, ವಾಸ : ಮನೆ ನಂ. : 2009:3, ಮೋದಿ ಆಸ್ಪತ್ರೆ ರಸ್ತೆ, ಸದರನ್ ಪಿ.ಜೆ. ಬಡಾವಣೆ, ದಾವಣಗೆರೆ. 2) ಜುಬೇದ್ ಬೇಗಂ ಕೋಂ ಕೆ.ಎ. ಶಾಹಿದ್, ವಯಸ್ಸು ಸುಮಾರು 68 ವರ್ಷ, ವಾಸ : ನಂ. : 2009:2, ಮೋದಿ ಆಸ್ಪತ್ರೆ ರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ.**

**ವಿರುದ್ಧ / –**

**ಎದುರುದಾರರು : ಮಾನ್ಯ ಆಯುಕ್ತರು, ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ.**

**ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

**ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ಸಿ. ಮಹಮ್ಮದ್ ಚಮನ್ ಯಾನೆ ಚಮನ್ ಸಾಹೇಬ್ ಬಿನ್ ಪಕ್ಕೀರ್ ಸಾಬ್ ಇವರು ದಿನಾಂಕ : 22.07.1973 ರಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿಧಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಕರಾರು ಇದ್ದಲ್ಲಿ, ನಿಮ್ಮ ಹಾಜರಾತಿಗಾಗಿ ದಿನಾಂಕ : 16.12.2021 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿಯಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 12.11.21 ರಂದು ಕೊಡಲ್ಪಟ್ಟಿದೆ.**

**ಚಮನ್ ಸಾಬ್ ಅಂಗಡಿ**
**ಅರ್ಜಿದಾರರ ಪರ ವಕೀಲರು**
**ದಾವಣಗೆರೆ.**
**ದಿನಾಂಕ : 12.11.2021**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**
**1ನೇ ನ್ಯಾಯಾಲಯ, ದಾವಣಗೆರೆ.**

### ಅಣಬೇರು ಗ್ರಾಮದಲ್ಲಿ ಇಂದು

# ಈಶ್ವರ, ಆಂಜನೇಯ, ಕುಕ್ಕುವಾಡೇಶ್ವರಿ ದೇವಸ್ಥಾನಗಳ ಉದ್ಘಾಟನೆ



ದಾವಣಗೆರೆ ತಾಲ್ಲೂಕಿನ ಅಣಬೇರು ಗ್ರಾಮದಲ್ಲಿ ಶ್ರೀ ಈಶ್ವರ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಕುಕ್ಕುವಾಡೇಶ್ವರಿ ದೇವಿ ದೇವಸ್ಥಾನಗಳ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭವು ಇಂದು ನಡೆಯಲಿದೆ.

ಬೆಳಿಗ್ಗೆ 10.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ದೇವಸ್ಥಾನಗಳ ಸಮಿತಿ ಅಧ್ಯಕ್ಷ ಕೆ.ಸಿ. ರಾಜಪ್ಪ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಪ್ರೊ. ಎನ್. ಲಿಂಗಣ್ಣ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಅಪೂರ್ವ ಹೋಟೆಲ್ ಗ್ರೂಪ್ಸ್ ಮಾಲೀಕ ಅಣಬೇರು ರಾಜಣ್ಣ, ಜಿ.ಪಂ. ಮಾಜಿ ಅಧ್ಯಕ್ಷರಾದ ಅಣಬೇರು ಪಾರ್ವತಮ್ಮ, ಶೈಲಜಾ ಬಸವರಾಜ್, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಮಂಜುಳಾ ಶಿವಮೂರ್ತಿ, ಅಣಬೇರು ಗ್ರಾ.ಪಂ. ಅಧ್ಯಕ್ಷರಾದ ಕಾವ್ಯ ಬಿ.ಸಿ ಅಶೋಕ್ ಭಾಗವಹಿಸಲಿದ್ದಾರೆ.



## ಜಿಎಸ್ ಚಿರಂತ್‌ಗೆ ಗೋಲ್ಡ್ ಮೆಡಲ್

ದಾವಣಗೆರೆ, ನ. 13- ಮೈಸೂರಿನಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಥಮ ಸ್ಥಾನ ಪಡೆದ ಕಿಕ್ ನಗರದ ಯುವ ಪ್ರತಿಭೆ 11 ವರ್ಷದ ಚಿರಂತ್‌ಗೆ ಚಿನ್ನದ ಪದಕ ದೊರೆತಿದೆ. ನಗರದ ತರಬೇತುದಾರ ಕೆ.ಪಿ. ಜೋಸ್ ಇವರಲ್ಲಿ ತರಬೇತಿ ಪಡೆಯುತ್ತಿರುವ ಚಿರಂತ್ ಕರವೇ ನಗರ ಘಟಕದ ಉಪಾಧ್ಯಕ್ಷ ಜಿ.ಎಸ್. ಸಂತೋಷ್ ಇವರ ಪುತ್ರರಾಗಿದ್ದಾರೆ.

### ಶೇ.30ರಷ್ಟು ಮಾತ್ರ ಕಸ ವಿಂಗಡಣೆ, ಮಳೆಗಾಲದಲ್ಲಿ ನಿಂತ ಗೊಬ್ಬರ ಉತ್ಪಾದನೆ

# ಕಸ ಸಂಸ್ಕರಣಾ ಘಟಕಕ್ಕೆ ದಾವಣಗೆರೆ ನಿರೀಕ್ಷೆ

ದಾವಣಗೆರೆ, ನ. 13 - ನಗರದಲ್ಲಿ ಉತ್ಪಾದನೆಯಾಗುವ ನಿತ್ಯ ಕಸದ ವಿಂಗಡಣೆಯನ್ನು ಯಾಂತ್ರೀಕರಣಗೊಳಿಸುವ 17 ಕೋಟಿ ರೂ.ಗಳ ಯೋಜನೆ ಈಗ ರಾಜ್ಯ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ.

ಪ್ರಸಕ್ತ ಬೆಂಗಳೂರಿನಲ್ಲಿ ಮಾತ್ರ ಜಾರಿಯಲ್ಲಿರುವ ಯಾಂತ್ರೀಕೃತ ತ್ಯಾಜ್ಯ ಸಂಸ್ಕರಣ ಘಟಕವನ್ನು ನಗರದಲ್ಲೂ ಅಳವಡಿಸಲು ಪಾಲಿಕೆ ಟೆಂಡರ್ ಕರೆದಿದ್ದು, ಅದಕ್ಕೆ ಅನುಮೋದನೆ ದೊರೆತಿದೆ. ರಾಜ್ಯ ಸರ್ಕಾರದ ಹಣಕಾಸು ಬಿಡ್ ಒಪ್ಪಿಗೆಗಾಗಿ ಪ್ರಸ್ತಾವನೆ ರವಾನಿಸಲಾಗಿದೆ. ಬಿಡ್‌ಗೆ ಅನುಮತಿ ದೊರೆತರೆ, ಒಂಭತ್ತು ತಿಂಗಳಲ್ಲಿ ಕಸ ಸಂಗ್ರಹ ತಾಣ ಇರುವ ಆವರಗೊಳ್ಳದಲ್ಲಿ ಯೋಜನೆ ಜಾರಿಗೆ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ನಗರದ ಘನತ್ಯಾಜ್ಯ ವಿಲೇವಾರಿಗೆ 25 ಕೋಟಿ ರೂ.ಗಳ ವಿಸ್ತೃತ ಯೋಜನಾ ವರದಿಗೆ ಅನುಮೋದನೆ ನೀಡಿದೆ. ಈ ಯೋಜನೆಯಲ್ಲಿ 17 ಕೋಟಿ ರೂ. ತ್ಯಾಜ್ಯ ಸಂಸ್ಕರಣ ಘಟಕದ್ದಾಗಿದ್ದರೆ, ಉಳಿದದ್ದು ಮನೆ ಮನೆಯಿಂದ ಕಸ ಸಂಗ್ರಹಿಸುವ ವಾಹನಗಳನ್ನು ಖರೀದಿಸಲಿಕ್ಕಾಗಿದೆ.

ಪ್ರಸಕ್ತ ಪ್ರತಿದಿನ 170 ಟನ್ ಕಸ ನಗರದಲ್ಲಿ ಉತ್ಪಾದನೆಯಾಗುತ್ತಿದೆ. ಮುಂದಿನ ದಿನಗಳಲ್ಲಿ 200 ಟನ್ ತ್ಯಾಜ್ಯ ಉತ್ಪಾದನೆಯಾಗಬಹುದು ಎಂಬ ಅಂದಾಜಿದೆ. ಇದನ್ನು ಗುರಿಯಾಗಿಟ್ಟುಕೊಂಡು ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಯೋಜನೆ ಜಾರಿಗೆ ಬಂದರೆ, ಅಂದಿನ ಕಸ ಅಂದೇ ವಿಲೇವಾರಿಯಾಗಲಿದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.



ಈಗಿರುವ ಸಂದರ್ಭದಲ್ಲಿ ಶೇ.30ರಷ್ಟು ಮಾತ್ರ ಹಸಿ ಕಸ - ಒಣ ಕಸ ಪ್ರತ್ಯೇಕಿಸಲು ಸಾಧ್ಯವಾಗುತ್ತಿದೆ. ಉಳಿದ ಕಸವೆಲ್ಲ ಒಟ್ಟಿಗೆ ಸೇರುತ್ತಿರುವುದರಿಂದ ಆವರಗೊಳ್ಳದಲ್ಲಿರುವ 33 ಎಕರೆಗಳ ಕಸ ವಿಲೇವಾರಿ ತಾಣದಲ್ಲಿ ಸಮಸ್ಯೆಯಾಗುತ್ತಿದೆ.

ಹಸಿ ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸಲು ಪಾಲಿಕೆ ಮುಂದಾಗಿದೆ. ಆದರೆ, ಗೊಬ್ಬರ ಉತ್ಪಾದಿಸಲು ಪಾಲಿಕೆ ಗುರುತಿಸಿರುವ ಸಂಸ್ಥೆಯಾದ ದೇವನಗರಿ ಗ್ರೀನ್ ಪ್ಲಾನೆಟ್, ಮಳೆಗಾಲದ ಅವಧಿಯಲ್ಲಿ ಕಾರ್ಯ ನಿರ್ವಹಣೆ ಮಾಡಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗಷ್ಟೇ ಮತ್ತೆ ಗೊಬ್ಬರ ಉತ್ಪಾದನೆ ಕಾರ್ಯ ಮುಂದುವರೆಸಲಾಗುತ್ತಿದೆ.

ಹಸಿ ಹಾಗೂ ಒಣಕಸ ಸಂಪೂರ್ಣ ಪ್ರತ್ಯೇಕಿಸಲು ಸಾಧ್ಯವಾಗದೇ, ತ್ಯಾಜ್ಯದಿಂದ ಗೊಬ್ಬರ ಮಾಡುವ ಪ್ರಕ್ರಿಯೆಗೆ ಸಾಕಷ್ಟು ಸಮಯ ಬೇಕಾಗುತ್ತಿದೆ. ಯಾಂತ್ರೀಕೃತ ಘಟಕವು ಸಣ್ಣ ಹಾಗೂ ದೊಡ್ಡ ಗಾತ್ರದ ತ್ಯಾಜ್ಯ, ಲೋಹ, ಹಸಿ ಕಸವನ್ನು ಸ್ವಯಂ ಚಾಲಿತವಾಗಿ ಪ್ರತ್ಯೇಕಿಸುತ್ತದೆ. ಈ ಘಟಕದಿಂದ ಪ್ರತಿದಿನ 20 ಟನ್‌ಗಳಷ್ಟು ಗೊಬ್ಬರ ಪಡೆಯಲು ಸಾಧ್ಯವಾಗಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ನಗರ ಪಾಲಿಕೆ ಪ್ರಸಕ್ತ 78 ವಾಹನಗಳನ್ನು ತ್ಯಾಜ್ಯ ಸಂಗ್ರಹಕ್ಕೆ ಬಳಸುತ್ತಿದೆ. ಇವುಗಳಲ್ಲಿ ಟಾಟಾ ಏಸ್, ಟಿಪ್ಪರ್ ಇತ್ಯಾದಿಗಳು ಸೇರಿವೆ. ಇವುಗಳ ಜೊತೆಗೆ 11 ವಾಹನಗಳು ನೋಂದಣಿಯಾಗುವ ಹಂತದಲ್ಲಿವೆ. ಇನ್ನೂ 26 ವಾಹನಗಳನ್ನು ಖರೀದಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

### ತ್ಯಾಜ್ಯ ಸಂಗ್ರಹಕ್ಕೆ ಎಲೆಕ್ಟ್ರಿಕ್ ವಾಹನ

**ಮನೆಗಳಿಂದ ಕಸ ಸಂಗ್ರಹಕ್ಕಾಗಿ ಪಾಲಿಕೆ 13 ಆಟೋ ರೀತಿಯ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಿದೆ. ಹಸಿ ಹಾಗೂ ಒಣ ಕಸಗಳನ್ನು ಒಂದೇ ವಾಹನದಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಲು ಇದರಲ್ಲಿ ಅವಕಾಶ ಇದೆ. ವಾಹನಗಳು ಈಗ ನೋಂದಣಿಯಾಗಬೇಕಿದೆ. ಈ ತಿಂಗಳಲ್ಲಿ ವಾಹನಗಳು ಕಾರ್ಯಾರಂಭ ಮಾಡಲಿವೆ. ಪಾಲಿಕೆ ಇದೇ ಮೊದಲ ಬಾರಿಗೆ ಎಲೆಕ್ಟ್ರಿಕ್ ವಾಹನಗಳನ್ನು ಕಸ ಸಂಗ್ರಹಕ್ಕೆ ಬಳಸುತ್ತಿದೆ. 250 ಕೆಜಿಯಷ್ಟು ಕಸ ಸಂಗ್ರಹಿಸುವ ಸಾಮರ್ಥ್ಯದ ವಾಹನಗಳನ್ನು, ದೊಡ್ಡ ವಾಹನಗಳ ಸಂಚಾರಕ್ಕೆ ಜಾಗವಿಲ್ಲದ ಸ್ಲಂ ನಂತಹ ಪ್ರದೇಶಗಳಲ್ಲಿ ಬಳಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.**

**200 ಟನ್ ತ್ಯಾಜ್ಯ ವಿಲೇವಾರಿ ಸಾಮರ್ಥ್ಯದ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಯಾದಲ್ಲಿ ಅಂದಿನ ಕಸ ಅಂದೇ ವಿಲೇವಾರಿಯಾಗಲಿದೆ.**

**- ವಿಶ್ವನಾಥ ಮುದಜ್ಜಿ, ಪಾಲಿಕೆ ಆಯುಕ್ತ**

### ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಏರಿದ ಬೇಡಿಕೆ

**ಪ್ಲಾಸ್ಟಿಕ್ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗಳು ಉರುವಲಾಗಿ ಬಳಸಿಕೊಳ್ಳುತ್ತಿವೆ. ಕಳೆದ ಕೆಲ ತಿಂಗಳಲ್ಲಿ ಕಲ್ಲಿದ್ದಲು ಬೆಲೆ ಹೆಚ್ಚಾಗಿರುವುದರಿಂದ, ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಬೇಡಿಕೆ ಹೆಚ್ಚಾಗಿದೆ.**

**ಕಳೆದ ಜುಲೈ ತಿಂಗಳಲ್ಲಿ ಸಿಮೆಂಟ್ ಕಾರ್ಖಾನೆಗಳು 20 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ಪಡೆದಿದ್ದವು. ನಂತರ ಸೆಪ್ಟೆಂಬರ್‌ನಲ್ಲಿ 150 ಟನ್‌ಗಳ ತ್ಯಾಜ್ಯ ರವಾನಿಸಲಾಗಿತ್ತು. ಅಕ್ಟೋಬರ್‌ನಲ್ಲಿ 55 ಟನ್ ಪ್ಲಾಸ್ಟಿಕ್ ತ್ಯಾಜ್ಯ ಕಳಿಸಲಾಗಿದೆ.**

**ಸಿಮೆಂಟ್ ಘಟಕಗಳಿಂದ ಪ್ಲಾಸ್ಟಿಕ್ ಬೇಡಿಕೆ ಇತ್ತಾದರೂ, ಪೂರೈಸುವ ಸಮಸ್ಯೆ ಇತ್ತು. ಪೇಪರ್‌ಮ್ಯಾನ್ ಎನ್ವಿರಾನ್‌ಮೆಂಟಲ್ ಸಲ್ಯೂಷನ್ ಸಂಸ್ಥೆಯು ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿದೆ. ಈ ಸಂಸ್ಥೆಯ ಮೂಲಕ ಪ್ಲಾಸ್ಟಿಕ್ ಅನ್ನು ಘಟಕಗಳಿಗೆ ರವಾನಿಸುವ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

# ಪುನೀತ್ ಯುವಕರಾಗಿದ್ದರೂ ಹಿರಿಯರ ಪ್ರೀತಿಯನ್ನು ಗೆದ್ದು ಮಾದರಿಯಾಗಿದ್ದಾರೆ

### ಮಲೇಬೆನ್ನೂರು : ಕ್ರಿಕೆಟ್ ಟೂರ್ನಿಗೆ ಚಾಲನೆ ನೀಡಿದ ಮಾಜಿ ಶಾಸಕ ಹರೀಶ್



ಮಲೇಬೆನ್ನೂರು, ನ.13- ಪಟ್ಟಣದ ರಾಕ್ ಕ್ರಿಕೆಟರ್ಸ್ ವತಿಯಿಂದ ಬಸವೇಶ್ವರ ಬಡಾವಣೆಯ ಬನ್ನಿಕಟ್ಟೆ ಆವರಣದಲ್ಲಿ ನಟ ಪುನೀತ್ ರಾಜಕುಮಾರ್ ಅವರ ಪುಣ್ಯಸ್ಮರಣೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಟೆನ್ನಿಸ್ ಬಾಲ್ ಮಿನಿ ಬೌಂಡರಿ ಕ್ರಿಕೆಟ್ ಟೂರ್ನಿಯನ್ನು ಮಾಜಿ ಶಾಸಕ ಬಿ.ಪಿ. ಹರೀಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ನಟ ಪುನೀತ್ ರಾಜಕುಮಾರ್ ಯುವಕರಾಗಿದ್ದರೂ, ತಮ್ಮ ಉತ್ತಮ ಅಭಿನಯ ಹಾಗೂ ಸರಳತೆಯ ಮೂಲಕ ಹಿರಿಯರ ಮನಸ್ಸನ್ನು ಗೆದ್ದಿದ್ದರು. ಅವರ ಅಗಲಿಕೆ ಪ್ರತಿಯೊಬ್ಬರಿಗೂ ನೋವು ತಂದಿದೆ. ಅವರ ಹೆಸರಿನಲ್ಲಿ ಯುವಕರು ಕ್ರಿಕೆಟ್ ಟೂರ್ನಿ ಏರ್ಪಡಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ನಟ ಪುನೀತ್ ರಾಜಕುಮಾರ್ ಅವರು ಜನಪ್ರಿಯತೆಯಲ್ಲಿ ತಂದೆಯನ್ನು ಮೀರಿಸಿದ್ದಾರೆ. ಪುನೀತ್ ಅವರ ಗುಣ ಹಾಗೂ ಒಳ್ಳೆಯ ಮನಸ್ಸು ಎಲ್ಲರಿಗೂ ಮಾದರಿಯಾಗಿದೆ ಎಂದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಮಾತನಾಡಿ, ನಟ ಪುನೀತ್ ಅವರಂತೆ ನಾವೆಲ್ಲರೂ ಉತ್ತಮ ದಾರಿಯಲ್ಲಿ ಸಾಗುವ ಮೂಲಕ ಆತ್ಮಕ್ಕೆ ಚಿರಶಾಂತಿ ಸಲ್ಲಿಸೋಣ ಎಂದರು.

ಹಿರಿಯ ಮುಖಂಡ ಬಿ. ವೀರಯ್ಯ, ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪಿಎಸ್‌ಐ ಡಿ. ರವಿಕುಮಾರ್ ಮಾತನಾಡಿ, ಪುನೀತ್ ಅವರ ಆದರ್ಶದ ಬದುಕನ್ನು ಮೈಗೂಡಿಸಿಕೊಳ್ಳಿ ಎಂದು ಯವಕರಿಗೆ ತಿಳಿಸಿದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್, ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಎ.ಕೆ. ಲೋಕೇಶ್, ಆಶ್ರಯ ಸಮಿತಿ ಸದಸ್ಯ ಬಿ. ಮಂಜುನಾಥ್, ಜಿಗಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಹೆಚ್.ಎಸ್. ರುದ್ರಯ್ಯ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹುಣ್ಣೆ ರೇವಣಪ್ಪ, ಬಿ.ಜಿ. ಪಾಲಾಕ್ಷಪ್ಪ, ಈರಣ್ಣ, ಹನುಮಗೌಡ, ರಾಕ್ ಕ್ರಿಕೆಟರ್ಸ್‌ನ ಸಂಜು, ಆಕಾಶ್, ಕಾರ್ತಿಕ್, ಅಭಿ, ರಾಕೇಶ್, ಕಿರಣ್, ಗಂಗಾಧರ್, ಈ ವೇಳೆ ಹಾಜರಿದ್ದರು.

ಭಾನುವಾರ ಸಂಜೆ ಕ್ರಿಕೆಟ್ ಟೂರ್ನಿಯ ಸಮಾರೋಪ ಸಮಾರಂಭದಲ್ಲಿ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಿದ್ದಾರೆ.

## ನಗರದಲ್ಲಿಂದು ಅಥ್ಲೆಟಿಕ್ ಕ್ರೀಡಾಕೂಟ

ಡಿಸೆಂಬರ್ ನಲ್ಲಿ ನಡೆಯುವ ರಾಷ್ಟ್ರೀಯ ಅಂತರ್ ಜಿಲ್ಲಾ ಕ್ರೀಡಾಕೂಟ (14 ಮತ್ತು 16 ವರ್ಷಗಳ ಬಾಲಕ-ಬಾಲಕಿಯರು)ಕ್ಕೆ ಜಿಲ್ಲೆಯ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ಸಲುವಾಗಿ ಇಂದು ಬೆಳಿಗ್ಗೆ 8.30ಕ್ಕೆ ಅಥ್ಲೆಟಿಕ್ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ.

ಆಸಕ್ತ 12, 14 ಹಾಗೂ 16 ವರ್ಷದೊಳಗಿನ ಬಾಲಕ, ಬಾಲಕಿಯವರು ಆಧಾರ್ ಕಾರ್ಡ್ ಹಾಗೂ ಹುಟ್ಟಿದ ದಿನಾಂಕದ ಬಗ್ಗೆ ಶಾಲಾ ದೃಢೀಕರಣ ಪತ್ರದೊಂದಿಗೆ ಇಂದು ಬೆಳಿಗ್ಗೆ 8.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಬಂದು ಹೆಸರು ನೋಂದಾಯಿಸಲು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಪದಾಧಿಕಾರಿಗಳು ಕೋರಿದ್ದಾರೆ.

14 ಮತ್ತು 16 ವರ್ಷದೊಳಗಿನ ಒಟ್ಟು 13 ಕ್ರೀಡಾಪಟುಗಳನ್ನು ರಾಷ್ಟ್ರೀಯ ಅಂತರ್ ಜಿಲ್ಲಾ ಕ್ರೀಡಾಕೂಟಕ್ಕೆ ಆಯ್ಕೆ ಮಾಡಿ ಕಳುಹಿಸಲಾಗುವುದೆಂದು ಅವರು ಹೇಳಿದ್ದಾರೆ.

## ಇಂದಿನಿಂದ ಚೈಲ್ಡ್ ದೋಸ್ತಿ ಸಪ್ತಾಹಕ್ಕೆ ಚಾಲನೆ

ದಾವಣಗೆರೆ ಜಿಲ್ಲೆಯಾದ್ಯಂತ ಇಂದಿನಿಂದ ಇದೇ ದಿನಾಂಕ 20 ರವರೆಗೆ ಚೈಲ್ಡ್‌ಲೈನ್ ದೋಸ್ತಿ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 10.30 ಕ್ಕೆ ಎಸ್‌ಜೆಎಂ ನಗರದ ಗಣೇಶ್ ವೃತ್ತದಲ್ಲಿ ಮಕ್ಕಳ ಸುರಕ್ಷತೆ ಜಾಗೃತಿ ಬೈಕ್ ರ್‍ಯಾಲಿ ನಡೆಯಲಿದೆ. ಗಣೇಶ ವೃತ್ತದಿಂದ ಆರಂಭಗೊಂಡು ಶಿಬಾರ ವೃತ್ತ, ಶಿವಾಲಿ ಟಾಕೀಸ್ ರಸ್ತೆ, ಹೊಸ ಕೋರ್ಟ್ ಮುಂಭಾಗ, ಪೂಜಾ ಹೋಟೆಲ್ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ ನಿಜಲಿಂಗಪ್ಪ ಬಡಾವಣೆಯ ಗಡಿಯಾರ ವೃತ್ತದ ಬಳಿ ಮುಕ್ತಾಯಗೊಳ್ಳಲಿದೆ.

## ನಗರದಲ್ಲಿ ಇಂದು ಬಂಜೆತನ ತಪಾಸಣೆ

ಗರ್ಭಗುಡಿ ಐವಿಎಫ್ ಸೆಂಟರ್‌ನಿಂದ ರೋಟರಿ ಬಾಲಭವನದಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ರವರೆಗೆ ಬಂಜೆತನ ತಪಾಸಣಾ ಶಿಬಿರ ನಡೆಯಲಿದೆ. ಬಂಜೆತನ ನಿವಾರಣಾ ತಜ್ಞರಾದ ಡಾ. ಆಶಾ ಎಸ್. ವಿಜಯ್ ಅವರು ಶಿಬಿರವನ್ನು ನಡೆಸಿಕೊಡುವರು.

## ವಾಯು ಮಾಲಿನ್ಯದಿಂದ ದೆಹಲಿ ಶಾಲಾ - ಕಾಲೇಜುಗಳು ಬಂದ್

ನವದೆಹಲಿ, ನ. 13 – ಈ ಹಿಂದೆ ಕೊರೊನಾದಿಂದ ಮುಚ್ಚಲಾಗಿದ್ದ ದೆಹಲಿ ಶಾಲೆಗಳು, ಈಗ ವಾಯು ಮಾಲಿನ್ಯದ ಕಾರಣದಿಂದಾಗಿ ಮುಚ್ಚಲ್ಪಟ್ಟಿವೆ. ಒಂದು ವಾರ ಕಾಲ ಆನ್‌ಲೈನ್ ಮೂಲಕ ಶಾಲಾ-ಕಾಲೇಜುಗಳ ತರಗತಿಗಳನ್ನು ನಡೆಸಲು ದೆಹಲಿ ಸರ್ಕಾರ ಆದೇಶಿಸಿದೆ. 19 ತಿಂಗಳ ಕಾಲ ಮುಚ್ಚಲಾಗಿದ್ದ ದೆಹಲಿ ಶಾಲೆಗಳನ್ನು, ಕಳೆದ ನವೆಂಬರ್ 1ರಿಂದ ತೆರೆಯಲಾಗಿತ್ತು. ಈಗ ಮತ್ತೆ ಒಂದು ವಾರ ಕಾಲ ಮುಚ್ಚಲು ಆದೇಶಿಸಲಾಗಿದೆ.

## ತ್ರಿಪುರದಲ್ಲಿ ಮಸೀದಿ ಹಾನಿ ಎಂಬುದು ಸುಳ್ಳು ಸುದ್ದಿ : ಕೇಂದ್ರ ಗೃಹ ಸಚಿವಾಲಯದ ಸ್ಪಷ್ಟನೆ

ನವದೆಹಲಿ, ನ. 13 – ತ್ರಿಪುರದಲ್ಲಿ ಮಸೀದಿಗಳಿಗೆ ಹಾನಿ ಮಾಡಲಾಗಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಡಿಸಿರುವ ಮಾಹಿತಿ ಸುಳ್ಳು ಹಾಗೂ ವಾಸ್ತವವನ್ನು ತಿರುಚಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಸ್ಪಷ್ಟಪಡಿಸಿದೆ.

ತ್ರಿಪುರದಲ್ಲಿ ನಡೆದ ಘಟನೆಗಳಲ್ಲಿ ಸರಳ ಇಲ್ಲವೇ ಗಂಭೀರ ಗಾಯ, ಅತ್ಯಾಚಾರ ಇಲ್ಲವೇ ಸಾವು ಸಂಭವಿಸಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಬಂದಿರುವ ಇಂತಹ ವರದಿಗಳು ಸುಳ್ಳು ಎಂದು ಸಚಿವಾಲಯ ಹೇಳಿದೆ.

ಕಠಿಣ ಪದಗಳ ಹೇಳಿಕೆ ನೀಡಿರುವ ಗೃಹ ಸಚಿವಾಲಯ, ಯಾವುದೇ ಮಸೀದಿಗೆ ಇತ್ತೀಚೆಗೆ ಹಾನಿಯಾಗಿಲ್ಲ. ಜನರು ತಾಳ್ಮೆ ಕಾಯ್ದುಕೊಳ್ಳಬೇಕು. ಇಂತಹ ನಕಲಿ ವರದಿಗಳಿಂದ ತಪ್ಪು ನಿರ್ಧಾರಕ್ಕೆ ಬರ ಬಾರದು ಎಂದು ತಿಳಿಸಿದೆ. ತ್ರಿಪುರದಲ್ಲಿ ಮಸೀದಿಗಳಿಗೆ ಹಾನಿ ಮಾಡಲಾಗಿದೆ ಎಂದು ದೇಶದ ಹಲವೆಡೆ ಪ್ರತಿಭಟನೆ ನಡೆಸಲಾಗಿತ್ತು. ಮಹಾರಾಷ್ಟ್ರದಲ್ಲಿ ನಡೆಸಲಾದ ಪ್ರತಿಭಟನೆ ಹಿಂಸಾ ಸ್ವರೂಪ ಪಡೆದಿತ್ತು.

## ಆವರಗೆರೆ : ಮಕ್ಕಳ ದಿನಾಚರಣೆ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಕೇಂದ್ರ, ಕಾಯಕ ಯೋಗಿ ಶ್ರೀ ಬಸವ ಪರಿಸರ ವೇದಿಕೆ, ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆ ಆವರಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ವಿದ್ಯಾಸಂಸ್ಥೆ ಆವರಣದಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈಶ್ವರಮ್ಮ ಪ್ರೌಢಶಾಲಾ ಉಪ ಪ್ರಾಂಶುಪಾಲರಾದ ಜಿ.ಎಸ್. ಶಶಿರೇಖಾ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಬಾಲ ವಿಜ್ಞಾನಿ ಪ್ರಶಸ್ತಿ ಪುರಸ್ಕೃತ ಆಪ್ತಾ ಶೆಟ್ಟಿ, ಕರಾವಿಪ ಜಿಲ್ಲಾ ಸಮಿತಿ ಸದಸ್ಯ ಹೆಚ್. ಚಂದ್ರಪ್ಪ, ರಾ.ಲ. ಕಾಯ್ದೆ ಕಾಲೇಜಿನ ಪ್ರಾಧ್ಯಾಪಕರಾದ ಶಾಂತಿಕ ಮುರುಡೇಶ್ವರ್, ಕಾಯಕ ಯೋಗಿ ಬಸವೇಶ್ವರ ಪರಿಸರ ವೇದಿಕೆ ಅಧ್ಯಕ್ಷ ಎನ್.ಟಿ. ರುದ್ರಪ್ಪ ಭಾಗವಹಿಸಲಿದ್ದು, ಬಿಐಇಟಿ ಉಪನ್ಯಾಸಕರಾದ ಎ.ಹೆಚ್. ಸುಗ್ಲಾದೇವಿ ಅಧ್ಯಕ್ಷತೆ ವಹಿಸಲಿದ್ದಾರೆ.

## ಕಿತ್ತೂರು ಚೆನ್ನಮ್ಮ ಜನ್ಮದಿನೋತ್ಸವ

ನಗರದಲ್ಲಿ ಇಂದು

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿಯಲ್ಲಿ ಇಂದು ಸಂಜೆ 6 ಘಂಟೆಗೆ ಜಿಲ್ಲಾ ಪಂಚಮಸಾಲಿ ಮಹಿಳಾ ಘಟಕದ ವತಿಯಿಂದ ವೀರ ರಾಣಿ ಕಿತ್ತೂರು ಚೆನ್ನಮ್ಮಾಜಿ ಜನ್ಮದಿನೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಬಿ.ಸಿ .ಉಮಾಪತಿ ಉದ್ಘಾಟಿಸಲಿದ್ದಾರೆ. ಶ್ರೀಮತಿ ಸುಮತಿ ಜಯಪ್ಪ, ಡಾ|| ಪುಷ್ಪಲತಾ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಮತಿ ರಶ್ಮಿ ನಾಗರಾಜ್ ಕುಂಕೋದ್ ವಹಿಸುವರು.

## ಹರಿಹರ : ಮತದಾರರ ಪಟ್ಟಿ ಪರಿಷ್ಕರಣೆ ವೇಳಾಪಟ್ಟಿ

ಹರಿಹರ, ನ.13- ಹರಿಹರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಂದು ಸಂಬಂಧಿಸಿದ ಮತಗಟ್ಟೆಗಳಲ್ಲಿ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಮತದಾರರು ಪಟ್ಟಿಯಲ್ಲಿ ಹೆಸರು ನೋಂದಣಿ ಆಗಿದೆಯೇ ಎಂದು ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಿ, ಖಚಿತಪಡಿಸಿಕೊಳ್ಳಲು ತಹಶೀಲ್ದಾರ್ ತಿಳಿಸಿದ್ದಾರೆ.

ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿ ನ.8 ರಿಂದ ಡಿಸೆಂಬರ್ 8 ರವರೆಗೆ, ವಿಶೇಷ ಆಂದೋಲನ ನಾಳೆ ದಿನಾಂಕ 14, 21 ಮತ್ತು 28 ರಂದು, ಹಕ್ಕು ಮತ್ತು ಆಕ್ಷೇಪಣೆಗಳನ್ನು ವಿಲೇಪಡಿಸುವ ಅವಧಿ ಡಿಸೆಂಬರ್ 27ರೊಳಗೆ ಹಾಗೂ ಅಂತಿಮ ಮತದಾರರ ಪಟ್ಟಿಯನ್ನು 13.01.2022 ಗುರುವಾರ ಪ್ರಕಟಿಸಲಾಗುವುದು.

ಆನ್‌ಲೈನ್ ಮೂಲಕವೂ ವೋಟ್ ಫಾರ್ ಆ್ಯಪ್, www.nvsp.in ವೆಬ್‌ಸೈಟ್, ವೋಟರ್ ಪೋರ್ಟಲ್ (www.voterprortal.eci.gov.in), ಸಾಮಾನ್ಯ ಸೇವಾ ಕೇಂದ್ರದ ಮುಖಾಂತರವೂ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿಶ್ವ ಮಧುಮೇಹ ದಿನಾಚರಣೆ

ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಮತ್ತು ಆಸ್ಪತ್ರೆ ವತಿಯಿಂದ ದಿ.ಆಲೂರು ಚಂದ್ರಶೇಖರಪ್ಪ ಅವರ ಜ್ಞಾಪಕಾರ್ಥವಾಗಿ ಹಾಗೂ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಆಸ್ಪತ್ರೆಯಲ್ಲಿ 37ನೇ ವಿಶ್ವ ಮಧುಮೇಹ ಮೇಳವು ಇಂದು ನಡೆಯಲಿದೆ ಎಂದು ಡಾ.ಮಂಜುನಾಥ ಆಲೂರು ತಿಳಿಸಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪ ಆಲೂರು ವಹಿಸಿಕೊಳ್ಳಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಆಲೂರು ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 7 ರಿಂದ ಉಚಿತವಾಗಿ ರಕ್ತ ಪರೀಕ್ಷೆ ನಡೆಸಲಾಗುವುದು. ನಂತರ ಸಕ್ಕರೆ ಕಾಯಿಲೆ ಬಗ್ಗೆ ನುರಿತ ತಜ್ಞರು ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದರು.

## ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಇಂದು ಉದ್ಘಾಟನೆ

ರಾಷ್ಟ್ರದ ಪ್ರಥಮ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರ ಹುಟ್ಟು ಹಬ್ಬದ ಸುಸಂದರ್ಭದಲ್ಲಿ ಕೆಪಿಸಿಸಿಯಿಂದ ಐತಿಹಾಸಿಕ ಹಾಗೂ ಅತೀ ಮಹತ್ವದ ಕಾಂಗ್ರೆಸ್ ಸದಸ್ಯತ್ವ ಅಭಿಯಾನದ ಉದ್ಘಾಟನಾ ಕಾರ್ಯಕ್ರಮವು ಬೆಂಗಳೂರಿನ ಅರಮನೆ ಆವರಣದಲ್ಲಿರುವ ಗಾಯತ್ರಿ ವಿಹಾರ್‌ನಲ್ಲಿ ಇಂದು ಬೆಳಿಗ್ಗೆ 11 ಕ್ಕೆ ನಡೆಯಲಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಕೆ. ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್ ಹಾಗೂ ಆರ್.ಹೆಚ್. ನಾಗಭೂಷಣ್ ತಿಳಿಸಿದ್ದಾರೆ. ಅಭಿಯಾನವನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಉದ್ಘಾಟಿಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ. ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.


**ಬೆಳ್ಳಿ ಫೋಟೋಗಳು ಹೋಲ್‌ಸೇಲ್ ದರದಲ್ಲಿ ಸಿಗುತ್ತವೆ**

ಮದುವೆ, ಗೃಹಪ್ರವೇಶ, ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾ ಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವಪಾರ್ವತಿ, ರಾಘವೇಂದ್ರ, ಆಂಜನೇಯ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರಲಿಂಗೇಶ್ವರ, ವೀರಭದ್ರಸ್ವಾಮಿ, ಚಾಮುಂಡೇಶ್ವರಿ ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ.

ಸ್ಥಳ : ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್, ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.

**Change of Name**

I Shashidhara A.J. Resident of 6th Cross, Nittuvalli New Extention Chandrappa Hotel Road, New HKR Circle, Davangere Taluk, District-577002 India have Changed my Doughter name from **SIRI Samrudhi (old Name) to Siri Samrudhi A.S. (New Name)** Vide Affidavit dated 13.11.2021 sworn before Notory kalyanamma M.K. Davangere. Henceforth all her transactions and deallings will be in her new name **Siri Samrudhi A.S.**

ಸಿರಿ ಸಮೃದ್ಧಿ ಎ.ಎಸ್.

**ಮಾರಾಟಕ್ಕಿವೆ**

ಹೋಟೆಲ್‌ಗೆ ಬೇಕಾಗಿರುವ ಅಡುಗೆ ಸಾಮಾನುಗಳು ಮತ್ತು ಟೇಬಲ್, ಚೇರ್‌ಗಳು ಮಾರಾಟಕ್ಕಿವೆ.

*ಸಂಪರ್ಕಿಸಿ :*

**98802-94032**

**ಕಾರುಣ್ಯ ಪತ್ತಿನ ಸೌಹಾರ್ದ ಸಹಕಾರಿ ನಿ.**

# 4/1ಎ, ಚೌಕಿಪೇಟೆ, ದಾವಣಗೆರೆ.

**ಚುನಾವಣಾ ಪ್ರಕಟಣೆ**

ದಾವಣಗೆರೆ ಕಾರುಣ್ಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ದಾವಣಗೆರೆ, ಇದರ ದಿನಾಂಕ 28.11.2021ರಿಂದ ಮುಂದಿನ 5 ಸಹಕಾರಿ ವರ್ಷಗಳ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ದಿನಾಂಕ 28.11.2021 ರಂದು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ದಾವಣಗೆರೆ ಉತ್ತರ ವಲಯ, ಕೆ.ಆರ್. ಮಾರ್ಕೆಟ್ ಹತ್ತಿರ ದಾವಣಗೆರೆಯಲ್ಲಿ ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ 21.11.2021 ಆಗಿದ್ದು ಹೆಚ್ಚಿನ ವಿವರಗಳಿಗಾಗಿ ಸಹಕಾರಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಚುನಾವಣಾಧಿಕಾರಿ**

ದಾವಣಗೆರೆ ಕಾರುಣ್ಯ ಪತ್ತಿ ಸೌಹಾರ್ದ ಸಹಕಾರಿ ನಿಯಮಿತ, ದಾವಣಗೆರೆ

**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಅಂಡ್ ಹಾಸ್ಪಿಟಲ್**

ಸಕ್ಕರೆ ಕಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರ

2ನೇ ಮುಖ್ಯರಸ್ತೆ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002.

37ನೇ ವಿಶ್ವ ಮಧುಮೇಹ ದಿನಾಚರಣೆ -2021

ದಿನಾಂಕ 14.11.2021ರ ಭಾನುವಾರ, ಬೆಳಿಗ್ಗೆ 8 ರಿಂದ ಮಧ್ಯಾಹ್ನ 1 ರವರೆಗೆ

'ಸಕ್ಕರೆ ಖಾಯಿಲೆ ಚಿಕಿತ್ಸೆಗೆ ಮಾರ್ಗದರ್ಶನ'

ಉಚಿತ ರಕ್ತ ಪರೀಕ್ಷೆ ಮತ್ತು ತಪಾಸಣೆ

ಸರ್ವರಿಗೂ ಸ್ವಾಗತ... ಸುಸ್ವಾಗತ...

**ANVITH ENTERPRISES FINANCIAL ADVISOR®**

ಕಳೆದ ಹತ್ತು ವರ್ಷಗಳಿಂದ ಉತ್ತಮ ಸಲಹೆ ಮತ್ತು ಮಾರ್ಗದರ್ಶನದೊಂದಿಗೆ

1. Where Should I Invest Amount to get good returns? Whether in Shares, Mutual Funds, Insurance, Gold or In Real Assets? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತಮ ಮಾರ್ಗದರ್ಶನಕ್ಕಾಗಿ,
2. ಷೇರು ಮಾರುಕಟ್ಟೆಯ ಏರಿಳಿತದ ಭಯವಿಲ್ಲದೆ **Yearly Return (9 to 12% PA)** ಆದಾಯವನ್ನು ಗಳಿಸಲು ಹಾಗೂ
3. ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದಿಂದ ಆರ್ಥಿಕವಾಗಿ ಸಬಲರಾಗಲು.

ಸಂಪರ್ಕಿಸಿ: **87926 73593**


**SHREE VEERABHADRESHWARA CONSULTANCY SERVICES**

*CIVIL ENGINEERS AND DEVELOPERS*

# 80/18, Opp. P.J. Lodge, A.V.K. College Road, P.J. Extension, DAVANGERE-577 002.

Cell: 9916173399, 9343277422

*WE OFFER THE FOLLOWING SERVICE :*



✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS

**ಬೇಕಾಗಿದ್ದಾರೆ**

S.S.L.C/PUC/Degree ಆದ ಕಂಪ್ಯೂಟರ್ ಜ್ಞಾನವಿರುವ ಪುರುಷ ಕೆಲಸಗಾರರು ಬೇಕಾಗಿದ್ದಾರೆ.

ತಕ್ಷಣ ಸಂಪರ್ಕಿಸಿ :

**ಜ್ಯೋತಿ ಗ್ಯಾಸ್ ಏಜೆನ್ಸಿ**

1ನೇ ಕ್ರಾಸ್, ಅಶೋಕ ರಸ್ತೆ, ದಾವಣಗೆರೆ.

99645 96070, 08192 235060-6

**ಬೇಕಾಗಿದ್ದಾರೆ**

Diploma in Hardware Networking / Software ಆದವರು ಬೇಕಾಗಿದ್ದಾರೆ.

ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸಂಪರ್ಕಿಸಿ : ಎ.ಕೆ. ಫಾರ್ಮ**

ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

# ಫೈಜರ್‌ನಿಂದ ಕೊರೊನಾಗೆ ಔಷಧಿ

**ಆಸ್ಪತ್ರೆಗೆ ದಾಖಲು, ಮರಣ ಪ್ರಮಾಣ 89% ಇಳಿಕೆ**

ಮೆಲ್ಬೋರ್ನ್, ನ. 13 – ತನ್ನ ಕೊರೊನಾ ವಿರೋಧಿ ಔಷಧಿಯಾದ ಪಾಕ್ಸ್‌ಲವಿಡ್‌ನಿಂದ ಕೊರೊನಾ ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಇಲ್ಲವೇ ಸಾವನ್ನಪ್ಪುವ ಪ್ರಮಾಣ ಶೇ.89ರಷ್ಟು ಕಡಿಮೆಯಾಗುತ್ತದೆ ಎಂದು ಫೈಜರ್ ತಿಳಿಸಿದೆ. ಕೊರೊನಾ ಆರಂಭವಾದ ನಂತರ ರೋಗಿಗಳಿಗೆ ಚಿಕಿತ್ಸೆ ನೀಡಲು ಹಲವಾರು ರೀತಿಯ ಗುಳಿಗೆಗಳನ್ನು ಬಳಸಲಾಗುತ್ತಿತ್ತು. ಈಗ ಒಂದೇ ಔಷಧಿ ಮೂಲಕ ಚಿಕಿತ್ಸೆ ನೀಡಬಹುದು ಎಂದು ತಿಳಿಸಲಾಗಿದೆ.

ಔಷಧದ 2/3ನೇ ಹಂತದ ಪ್ರಯೋಗದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದನ್ನು ಇನ್ನೂ ಸ್ವತಂತ್ರ ಪರಿಶೀಲನೆಗೆ ಒಳಪಡಿಸಬೇಕಿದೆ. ಇದುವರೆಗೂ ಯಾವುದೇ ದೇಶ ಔಷಧಿಗೆ ಒಪ್ಪಿಗೆ ನೀಡಿಲ್ಲ. ಆದರೂ, ಕೊರೊನಾ ಎದುರಿಸಲು ಹಲವಾರು ಔಷಧಿಗಳು ಅಭಿವೃದ್ಧಿಯಾಗುತ್ತಿರುವುದು ಗಮನಾರ್ಹವಾಗಿದೆ. ಇವುಗಳಲ್ಲಿ ಪಾಕ್ಸ್‌ಲವಿಡ್ ಸಹ ಒಂದಾಗಿದೆ.

ಹೆಚ್.ಐ.ವಿ. ಔಷಧವಾದ ರಿಟೊನವಿರ್ ಹಾಗೂ ಪ್ರಯೋಗಾತ್ಮಕ ಔಷಧವಾದ ಪಿಎಫ್-07321332 ಸಂಯೋಜಿಸುವ ಮೂಲಕ ಪಾಕ್ಸ್‌ಲವಿಡ್ ರೂಪಿಸಲಾಗಿದೆ. ಕೊರೊನಾ ಅಪಾಯ ಅತಿ ಹೆಚ್ಚಾಗಿರುವ 1,219 ಜನರಿಗೆ ಪ್ರಾಯೋಗಿಕ ಹಂತದಲ್ಲಿ ಔಷಧಿ ನೀಡಲಾಗಿದೆ. ಕೊರೊನಾ ತೀವ್ರ ಸ್ವರೂಪ ಪಡೆಯುವ ಸಾಧ್ಯತೆ ಇರುವವರನ್ನೇ ಪ್ರಯೋ ಗಕ್ಕೆ ಒಳಪಡಿಸಲಾಗಿತ್ತು.

ಮಧ್ಯಂತರ ವರದಿಗಳ ಪ್ರಕಾರ ಔಷಧಿಯಿಂದ ಆಸ್ಪತ್ರೆಗೆ ದಾಖಲಾಗುವ, ಇಲ್ಲವೇ ಸಾವನ್ನಪ್ಪುವ ಪ್ರಮಾಣ ಶೇ.89ರಷ್ಟು ಕಡಿಮೆಯಾಗುತ್ತದೆ. ಔಷಧ ಪಡೆದವರಲ್ಲಿ 28 ದಿನಗಳ ನಂತರ ಯಾವುದೇ ಸಾವುಗಳು ದಾಖಲಾಗಿಲ್ಲ. ಪ್ರಯೋಗದ ಫಲಿತಾಂಶ ತೃಪ್ತಿಕರವಾಗಿರುವುದರಿಂದ, ಯಾವುದೇ ಹೊಸ ರೋಗಿಯನ್ನು ಅಧ್ಯಯನಕ್ಕೆ ಒಳಪಡಿಸುವುದಿಲ್ಲ ಎಂದು ಕಂಪನಿ ತಿಳಿಸಿದೆ. ಔಷಧಿಯ ತುರ್ತು ಒಪ್ಪಿಗೆಗಾಗಿ ವರದಿಯನ್ನು ಅಮೆರಿಕದ ಔಷಧ ನಿಯಂತ್ರಕರಿಗೆ ಸಲ್ಲಿಸಲಾಗಿದೆ. ಪಾಕ್ಸ್‌ಲವಿಡ್ ಅಷ್ಟೇ ಅಲ್ಲದೇ ಮರ್ಕ್ ಕಂಪನಿಯ ಮೊಲ್ನುಪಿರಾವಿರ್ ಹಾಗೂ ಅಸ್ಟ್ರಾಜೆನೆಕಾದ ಎವುಶೆಲ್ಡ್ ಔಷಧಿಗಳು ಕೊರೊನಾ ಚಿಕಿತ್ಸೆಗೆ ಲಭ್ಯವಾಗುವ ಹಾದಿಯಲ್ಲಿವೆ.

# 2 ಡೋಸ್ ಲಸಿಕೆ ಪಡೆಯದವರ ಮೇಲೆ ನಿರ್ಬಂಧ

**ಸೂರತ್**

ಸೂರತ್, ನ. 13 – ಎರಡು ಡೋಸ್ ಕೊರೊನಾ ಲಸಿಕೆ ಪಡೆಯದವರು ಉದ್ಯಾನವನ, ಪ್ರಾಣಿ ಸಂಗ್ರಹಾಲಯ ಹಾಗೂ ನಗರ ಬಸ್‌ಗಳಂತಹ ಸಾರ್ವಜನಿಕ ಪ್ರದೇಶಗಳಿಗೆ ಬರದಂತೆ ಗುಜರಾತ್‌ನ ಸೂರತ್ ನಗರ ಪಾಲಿಕೆ ನಿರ್ಬಂಧಿಸಿದೆ.

ನಗರದ 6.68 ಲಕ್ಷ ಜನರು ಇನ್ನೂ ಎರಡನೇ ಡೋಸ್ ಲಸಿಕೆ ಪಡೆದಿಲ್ಲ ಎಂದು ಸೂರತ್ ಪಾಲಿಕೆ ಆಯುಕ್ತ ಬಂಚನಿಧಿ ಪಾಣಿ ಹೇಳಿದ್ದಾರೆ.

ಇಂತಹವರು ಸಾರ್ವಜನಿಕ ಉದ್ಯಾನವನ, ಪಾರ್ಕ್, ಪ್ರಾಣಿ ಸಂಗ್ರಹಾಲಯ, ಅಕ್ವೇರಿಯಂ, ವಿಜ್ಞಾನ ಕೇಂದ್ರ ಇತ್ಯಾದಿಗಳಿಗೆ ಭೇಟಿ ನೀಡುವಂತಿಲ್ಲ. ಅವರು ನಗರ ಸಾರಿಗೆ ಬಸ್‌ಗಳನ್ನೂ ಏರುವಂತಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೊಸ ನಿಯಮಗಳು ಸೋಮವಾರದಿಂದ ಜಾರಿಗೆ ಬರಲಿವೆ.

# ತಂದೆ-ತಾಯಿಗಳು ಮಕ್ಕಳನ್ನು ಖಾಸಗಿ ಆಸ್ತಿ ಎಂಬಂತೆ ಮನ ಬಂದಂತೆ ನಡೆಸಿಕೊಂಡರೆ ಕಠಿಣ ಶಿಕ್ಷೆ

## ಹರಿಹರದ ಮಕ್ಕಳ ಹಕ್ಕುಗಳ ಅರಿವು ಕಾರ್ಯಕ್ರಮದಲ್ಲಿ ವಕೀಲರಾದ ಜಿ.ಹೆಚ್. ಭಾಗೀರಥಿ



ಹರಿಹರ, ನ.13- ಮಕ್ಕಳ ಹಕ್ಕುಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಹೊಣೆಯಾಗಿದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಆರ್. ಯಶವಂತ ಕುಮಾರ್ ಹೇಳಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘದಿಂದ ನಗರದ ಗುರು ತಿಪ್ಪೇರುದ್ರಸ್ವಾಮಿ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಹಾಗೂ ಮಕ್ಕಳ ಹಕ್ಕುಗಳ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಸಹ ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು. ಜೊತೆಗೆ ಹೆತ್ತವರಿಗೆ ಮತ್ತು ಪಾಠ ಕಲಿಸಿದ ಶಿಕ್ಷಕರಿಗೆ ವಿಶೇಷ ಗೌರವ ನೀಡಿ ನಿಮ್ಮ ವಿದ್ಯಾರ್ಥಿ ಜೀವನ ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಹದೇವ ಕಾನಟಿ ಮಾತನಾಡಿ, ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ, ಭ್ರೂಣ ಪತ್ತೆ-ಹತ್ಯೆ, ಭಿಕ್ಷಾಟನೆ ನಿಷೇಧ ಕಾಯ್ದೆಗಳನ್ನು ಹಾಗೂ ಉಚಿತ-ಕಡ್ಡಾಯ ಶಿಕ್ಷಣ, ಬಾಲನ್ಯಾಯ ಕಾಯಿದೆ, ದತ್ತಕ ನಿರ್ವಹಣೆ ಕಾಯ್ದೆ ಮುಂತಾದ ಕಾಯಿದೆಗಳನ್ನು ಮಕ್ಕಳ ಹಿತಕ್ಕಾಗಿ ರೂಪಿಸಲಾಗಿದೆ. ಶಾಲೆಗಳಲ್ಲಿ ಮಕ್ಕಳ ಮೇಲಾಗಬಹುದಾದ ದೈಹಿಕ ಶಿಕ್ಷೆ, ಮಾನಸಿಕ ಹಿಂಸೆಗಳನ್ನೂ ನಿರ್ಬಂಧಿಸಲಾಗಿದೆ ಎಂದು ವಿವರಿಸಿದರು.

ವಕೀಲರಾದ ಜಿ.ಹೆಚ್. ಭಾಗೀರಥಿ ಮಾತನಾಡಿ, ಎಲ್ಲಾ ಮಕ್ಕಳಿಗೂ ಪೌಷ್ಠಿಕ ಆಹಾರ ಸೇವಿಸುವ, ಉತ್ತಮ ಪರಿಸರ-ಆರೋಗ್ಯ ಹೊಂದುವ ಶಿಕ್ಷಣ, ಭದ್ರತೆ, ಆಟ, ಮನರಂಜನೆ ಪಡೆಯುವ ಹಕ್ಕು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದ್ದು, ಇವುಗಳನ್ನು ಯಾರೇ ಕಿತ್ತುಕೊಂಡರೂ ಅಪರಾಧವಾಗುತ್ತದೆ. ತಂದೆ-ತಾಯಿಗಳೂ ಸಹ ಮಕ್ಕಳನ್ನು ತಮ್ಮ ಖಾಸಗಿ ಆಸ್ತಿ ಎಂಬಂತೆ ಮನ ಬಂದಂತೆ ನಡೆಸಿಕೊಂಡರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದರು.

ವಕೀಲ ವಿ. ಲೋಹಿತ್ ಮಾತನಾಡಿ, ಮಕ್ಕಳು ಸಾಧ್ಯವಾದಷ್ಟು ಕಾನೂನು-ನಿಯಮಗಳನ್ನು ತಿಳಿದುಕೊಂಡು ಪಾಲಿಸಬೇಕು. ಮೂಢನಂಬಿಕೆ ಕೈಬಿಡುವಂತೆ ಪೋಷಕರ ಮನವೊಲಿಸುವುದರ ಮೂಲಕ ಮಾದರಿ ವಿದ್ಯಾರ್ಥಿಗಳಾಗಬೇಕೆಂದು ಕರೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ರುದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಸಾಕಮ್ಮ, ಸಂಘದ ಕಾರ್ಯದರ್ಶಿ ಗಣೇಶ್ ಕೆ. ದುರ್ಗದ, ಎಪಿಪಿ ಪ್ರವೀಣ್ ಕುಮಾರ್, ವಕೀಲರಾದ ಚಂದ್ರಾಚಾರಿ, ಮುಖ್ಯಶಿಕ್ಷಕ ಬಿ.ಬಿ. ರೇವಣನಾಯ್ಕ, ಶಿಕ್ಷಕರಾದ ಎಂ. ನಾಗರಾಜ, ಗಿರಿಜ, ಕೆ.ಇ. ಹೊನಕೇರಪ್ಪ, ಎಂ. ಮಂಜುನಾಥ, ಸಿ. ಮಂಜುನಾಥಪ್ಪ, ಆರ್.ಜಿ. ಮುರುಘರಾಜೇಂದ್ರ, ಶಿಕ್ಷಣ ಸಂಯೋಜಕರಾದ ತೀರ್ಥಪ್ಪ, ಲಿಂಗರಾಜು, ಗಿರೀಶ್ ಇನ್ನಿತರರಿದ್ದರು.

# ರಾಣೇಬೆನ್ನೂರು : ನಟ ಪುನೀತ್ ಅಭಿಮಾನಿಗಳಿಂದ ಚಿತ್ರಮಂದಿರ ಭರ್ತಿ



ರಾಣೇಬೆನ್ನೂರು, ನ.13- ದಿ. ಪುನೀತ್ ರಾಜಕುಮಾರ್ ನಟನೆಯ 'ಯುವರತ್ನ' ಚಿತ್ರ ವೀಕ್ಷಿಸಲು ಕಳೆದ ಮೂರು ದಿನಗಳ ಕಾಲ 12 ಪ್ರದರ್ಶನಗಳಿಗೆ ಉಚಿತ ಪ್ರವೇಶ ನೀಡಿದ ರಾಣೇಬೆನ್ನೂರಿನ ವೀಣಾ ಚಿತ್ರಮಂದಿರದಲ್ಲಿ 12 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಚಿತ್ರ ವೀಕ್ಷಿಸಿದ್ದಾರೆ ಎಂದು ಮಾಲೀಕ ಶೇರು ಕಾಬೂಲಿ ತಿಳಿಸಿದ್ದಾರೆ.

# ಎಸ್ಸೆಸ್ ಜನ ಕಲ್ಯಾಣ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ನ.13- ಶಾಸಕ 'ಡಾ. ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್' ವತಿಯಿಂದ 2021-22ನೇ ಸಾಲಿಗೆ ರಾಜ್ಯದ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿಯೂ ಆದ ಉದ್ಯಮಿ ಅಥಣಿ ವೀರಣ್ಣ ತಿಳಿಸಿದ್ದಾರೆ.

ಟ್ರಸ್ಟ್‌ನಿಂದ ಕಳೆದ 10 ವರ್ಷಗಳಿಂದ ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದು, ಹಿಂದಿನ ವರ್ಷ ಸುಮಾರು 700 ಜನ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದೆ.

ಈ ಬಾರಿ ಐ.ಟಿ.ಐ, ಡಿಪ್ಲೋಮಾ, ಪದವಿ ಕಾಲೇಜು, ವೃತ್ತಿ ಶಿಕ್ಷಣ ಕಾಲೇಜು, ಕಾನೂನು ಕಾಲೇಜು, ಮ್ಯಾನೇಜ್ ಮೆಂಟ್ ಮತ್ತು ಇತರೆ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ 2021-22 ರ ಶೈಕ್ಷಣಿಕ ಅವಧಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ಆಯಾ ಕಾಲೇಜುಗಳ ವಾರ್ಷಿಕ ಶುಲ್ಕಕ್ಕೆ ಅನುಗುಣವಾಗಿ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ವಿದ್ಯಾರ್ಥಿ ವೇತನವನ್ನು ನಿರೀಕ್ಷಿಸುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾನ್ವಿತ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆಯಾ ಶಾಲಾ - ಕಾಲೇಜುಗಳ ಮುಖ್ಯಸ್ಥರ ಮೂಲಕ ಕ್ರಮಬದ್ಧವಾದ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

**ಪತ್ರಕರ್ತರ ಮಕ್ಕಳಿಂದ ಅರ್ಜಿ :** ಜಿಲ್ಲೆಯ ಪತ್ರಕರ್ತರ, ಮಾಧ್ಯಮದವರ, ಪತ್ರಕರ್ತರ ಮತ್ತು ಮಾಧ್ಯಮ, ಛಾಯಾಗ್ರಾಹಕರ ಮಕ್ಕಳು ಆಯಾ ಶಾಲಾ ಕಾಲೇಜುಗಳ ಮುಖ್ಯಸ್ಥರ ಮೂಲಕ ಕ್ರಮಬದ್ಧವಾದ ಪ್ರಮಾಣ ಪತ್ರಗಳೊಂದಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ನಿಗದಿತ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಟ್ರಸ್ಟ್‌ನ ವೆಬ್‌ಸೈಟ್ ತಾಣ www.ssjanakalyantrust.org ವನ್ನು ಸಂಪರ್ಕಿಸಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಡಿಸೆಂಬರ್ 31 ಕೊನೆಯ ದಿನವಾಗಿದೆ ಎಂದು ಅಥಣಿ ವೀರಣ್ಣ ತಿಳಿಸಿದ್ದಾರೆ.

# ನಟ ಮನೋರಂಜನ್‌ಗೆ ಸನ್ಮಾನ



ದಾವಣಗೆರೆ, ನ. 13- 'ಮುಗಿಲ್‌ಪೇಟೆ' ಚಿತ್ರದ ಪ್ರಮೋಷನ್‌ಗಾಗಿ ಇಂದು ನಗರಕ್ಕಾಗಮಿಸಿದ್ದ ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಪುತ್ರ ಮನೋರಂಜನ್ ರವಿಚಂದ್ರನ್ ಅವರನ್ನು ಜಿಲ್ಲಾ ಕರ್ನಾಟಕ ರವಿಚಂದ್ರನ್ ಅಭಿಮಾನಿಗಳ ಸಂಘದಿಂದ ಮನು ಸ್ಟುಡಿಯೋದಲ್ಲಿ ಜಿಲ್ಲಾಧ್ಯಕ್ಷ ಎಂ. ಮನು, ನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ನೆನಪಿನ ಕಾಣಿಕೆ ನೀಡಿ, ಶಾಲು ಹೊದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್, ಗಣೇಶ್ ಚಿನ್ನಿಕಟ್ಟೆ, ದಯಾನಂದ, ಮೋದಿ, ಮಹಾಲಿಂಗಪ್ಪ, ಗಿರೀಶ್, ಚೇತನ್ ಮೆಡಿಕಲ್ ಶಾಪ್ ಮಂಜಣ್ಣ, ರಾಯ್ಕರ್ ಉಪಸ್ಥಿತರಿದ್ದರು.

# ಸ್ಥಳೀಯವಾಗಿ ಹೊಸ ಉದ್ಯಮಿಗಳನ್ನು ಬೆಳೆಸಲು ಆರ್ಥಿಕ ಪ್ರೋತ್ಸಾಹ ನೀಡಿ



## ನಂದಿ ಸೌಹಾರ್ದ ಸಹಕಾರಿಯ ವಾರ್ಷಿಕ ಮಹಾಸಭೆಯಲ್ಲಿ ಡಾ. ಸಾತೇನಹಳ್ಳಿ ಸಲಹೆ

ಮಲೇಬೆನ್ನೂರು, ನ.13- ಪಟ್ಟಣದ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತದ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಆವರಣದಲ್ಲಿ ಇಂದು ಜರುಗಿತು.

ಸಹಕಾರಿ ಕಾರ್ಯದರ್ಶಿ ಹೆಚ್.ಎಂ. ಬಸವರಾಜ್ ಸ್ವಾಗತಿಸಿದರು. ಅಕೌಂಟೆಂಟ್ ಎಂ.ಬಿ. ನಾಗನಗೌಡ ಅವರು ವಾರ್ಷಿಕ ಸಭೆಯ ಸೂಚನಾ ಪತ್ರ ಮತ್ತು ಇನ್ನೋರ್ವ ಅಕೌಂಟೆಂಟ್ ಹೆಚ್. ಸುಮಾ ಅವರು ಸಹಕಾರಿಯ ಪ್ರಥಮ ವರ್ಷದ ವಾರ್ಷಿಕ ಸಭೆಯ ನಡವಳಿಕೆಗಳನ್ನು ಓದಿದರು.

ಸಹಕಾರಿ ಅಧ್ಯಕ್ಷ ಹಳ್ಳಿಹಾಳ್ ಹೆಚ್. ವೀರನಗೌಡ ಅವರು ವಾರ್ಷಿಕ ವರದಿಯನ್ನು ಮಂಡಿಸಿದರು. ಆಡಳಿತ ಮಂಡಳಿ ನೀಡಿರುವ ಅನುಪಾಲನಾ ವರದಿಯನ್ನು ಕ್ಯಾಷಿಯರ್‌ಗಳಾದ ಬಿ.ಜಿ. ರಂಗನಾಥ್, ಹೆಚ್. ರುದ್ರಗೌಡ ಅವರು ಓದಿದಾಗ ಸಭೆಯು ಅಂಗೀಕರಿಸಿತು.

ಸಹಕಾರಿ ನಿರ್ದೇಶಕ ಹಳ್ಳಿಹಾಳ್ ಹೆಚ್. ಟಿ. ಶಾಂತನಗೌಡ ಅವರು ಲಾಭಾಂಶ ಹಂಚಿಕೆ ವಿಚಾರವನ್ನು ಸಭೆಯ ಗಮನಕ್ಕೆ ತಂದು ಒಪ್ಪಿಗೆ ಪಡೆದುಕೊಂಡರು. ಸಹಕಾರಿಯ ನಿರ್ದೇಶಕ ಸಂತೋಷ್ ಪಾಳೇದ್ ಅವರು ವಾರ್ಷಿಕ ಮುಂಗಡ ಪತ್ರ ಮಂಡಿಸಿದರು.

ಸಹಕಾರಿಯ ನಿರ್ದೇಶಕ ಜಿಗಳಿಯ ಗೌಡ್ರ ಬಸವರಾಜಪ್ಪ ಅವರು, ಸನ್ನದು ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರ ಸಂಭಾವನೆ ವಿಚಾರ ಪ್ರಸ್ತಾಪಿಸಿದಾಗ ಕಿರುವಾಡಿ ಸುರೇಂದ್ರಪ್ಪ ಅವರನ್ನು ನೇಮಕ ಮಾಡಿಕೊಳ್ಳಲು ಸಭೆ ಸಮ್ಮತಿ ಸೂಚಿಸಿತು.

ಸಹಕಾರಿಯ ಹಿರಿಯ ನಿರ್ದೇಶಕ ಜಿಗಳಿ ಇಂದೂಧರ್ ಅವರು, ಹಿರೇಕೆರೂರು ತಾಲ್ಲೂಕಿನ ಹಂಸಬಾವಿ ಅಥವಾ ಕೋಡದಲ್ಲಿ ಸಹಕಾರಿಯ ಶಾಖೆ ತೆರೆಯುವ ವಿಚಾರ ಪ್ರಸ್ತಾಪಿಸಿದರು. ಸದಸ್ಯರಾದ ಬಿ. ವೀರಯ್ಯ ಮತ್ತಿತರರು, ಸ್ಥಳೀಯವಾಗಿ ವರದಿ ತರಿಸಿಕೊಂಡ ನಂತರ ಶಾಖೆ ಪ್ರಾರಂಭಿಸಲು ಅನುಮತಿ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ನಂದಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಮಾಜಿ ಅಧ್ಯಕ್ಷ ಡಾ. ಬಿ.ಎಸ್. ಸಾತೇನಹಳ್ಳಿ ಮಾತನಾಡಿ, ಠೇವಣಿ ಹಣ ಬಳಕೆ ಆಗದೆ ಹಾಗೆಯೇ ಇದ್ದರೆ ಸಹಕಾರಿಗೆ ಹಾಗೂ ಸದಸ್ಯರಿಗೆ ನಷ್ಟವಾಗುತ್ತದೆ. ಸ್ಥಳೀಯವಾಗಿ ಉದ್ಯಮಿಗಳಿಗೆ ಆರ್ಥಿಕ ಪ್ರೋತ್ಸಾಹ ನೀಡಲು ಠೇವಣಿ ಹಣವನ್ನು ಸಾಲವಾಗಿ ನೀಡಿ, ಅದಕ್ಕಾಗಿ ಸೂಕ್ತ ಯೋಜನೆ ರೂಪಿಸಿ ಜನರನ್ನು ಸಹಕಾರಿ ಹತ್ತಿರ ಬರುವಂತೆ ಮಾಡಿ ಮತ್ತು ಸದಸ್ಯರಿಗೆ ಲಾಭಾಂಶದಲ್ಲಿ ಶೇ. 12 ರಷ್ಟು ಡಿವಿಡೆಂಡ್ ನೀಡಿ ಎಂದು ಸಲಹೆ ನೀಡಿದರು.

ಜಿಗಳಿಯ ಟಿ. ಚಂದ್ರಶೇಖರಪ್ಪ ಅವರು, ಜಾಮೀನು ಸಾಲದ ಬಡ್ಡಿಯನ್ನು ಶೇ. 15 ರಿಂದ 14 ಕ್ಕೆ ಇಳಿಸಿ, ಆಗ ನಿಮ್ಮಲ್ಲಿರುವ ಠೇವಣಿ ಹಣ ಸಾಲವಾಗಿ ಹೋಗುತ್ತದೆ ಎಂದರು.

ಉಪನ್ಯಾಸಕ ಹಿಂಡಸಘಟ್ಟೆ ಹನುಮಗೌಡ ಮತ್ತಿತರರು ಮಾತನಾಡಿ, ಜಾಮೀನು ಸಾಲವನ್ನು 40 ರಿಂದ 50 ಸಾವಿರಕ್ಕೆ ಹೆಚ್ಚಿಸಿ ಎಂಬ ವಿಷಯ ಪ್ರಸ್ತಾಪಿಸಿದಾಗ ಎಲ್ಲರೂ ಬೆಂಬಲಿಸಿದರು. ಆಗ ತಕ್ಷಣ ಸಹಕಾರಿ ಅಧ್ಯಕ್ಷ ಹೆಚ್. ವೀರನಗೌಡ ಅವರು ಜಾಮೀನು ಸಾಲವನ್ನು 50 ಸಾವಿರಕ್ಕೆ ಹೆಚ್ಚಿಸುವುದಾಗಿ ಘೋಷಿಸಿದರು.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಸ್‌ಡಿಓ ಜಗದೀಶ್, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಡಿವೈಎಸ್ಪಿ ಹಿಂಡಸಘಟ್ಟೆಯ ಪ್ರಕಾಶ್ ಅವರುಗಳು ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸಹಕಾರಿ ಉಪಾಧ್ಯಕ್ಷರಾದ ಶೋಭಾ ಬಿ.ಜಿ. ಪಾಲಾಕ್ಷಪ್ಪ, ನಿರ್ದೇಶಕರಾದ ಜಿಗಳಿಯ ಎಂ.ಬಿ. ನಾಗರಾಜ್, ಕೊಕ್ಕನೂರಿನ ಬಿ.ಹೆಚ್. ರವಿ, ಕೆ.ಹೆಚ್. ಆಂಜನೇಯ ಪಾಟೀಲ್, ಟಿ. ರಾಮಚಂದ್ರಪ್ಪ, ಆರ್. ನಾಗರಾಜ್, ಹಿಂಡಸಘಟ್ಟೆಯ ಸೌಭಾಗ್ಯ ಉದಯಕುಮಾರ್, ಹಳ್ಳಿಹಾಳ್ ಎ.ಕೆ. ತಿಪ್ಪೇಶಪ್ಪ, ಮಲೇಬೆನ್ನೂರಿನ ಎ. ಆರೀಫ್ ಅಲಿ ವೇದಿಕೆಯಲ್ಲಿದ್ದರು.

# ಕುವೆಂಪು ನಗರದಲ್ಲಿನ ಉದ್ಯಾನವನಕ್ಕೆ ಪುನೀತ್ ರಾಜ್‌ಕುಮಾರ್ ಹೆಸರು ನಾಮಕರಣ




ದಾವಣಗೆರೆ, ನ.13- ನಗರದ ಕುವೆಂಪು ನಗರದ 18ನೇ ಮುಖ್ಯರಸ್ತೆಯ 3ನೇ ಕ್ರಾಸ್‌ನಲ್ಲಿರುವ ಉದ್ಯಾನವನವೊಂದಕ್ಕೆ ಎಂ.ಕೆ.ಮಂಜು ಗೆಳೆಯರ ಬಳಗ ಮತ್ತು 42ನೇ ವಾರ್ಡ್‌ನ ಎಲ್ಲಾ ಹಿರಿಯರು ಸೇರಿ ಪುನೀತ್ ರಾಜ್‌ಕುಮಾರ್ ಉದ್ಯಾನವನ ಎಂದು ನಾಮಕರಣ ಮಾಡಿದ್ದಾರೆ.

# ನಂದಿಗುಡಿಯಲ್ಲಿ ಇಂದು ಭಕ್ತರ ಸಭೆ



ಮಲೇಬೆನ್ನೂರಿನ ನಂದಿಗುಡಿ ಬೃಹನ್ಮಠದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ದಾವಣಗೆರೆ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳ ಭಕ್ತರ ಸಭೆಯನ್ನು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಕರೆಯಲಾಗಿದೆ. ಡಿಸೆಂಬರ್ 13 ರಂದು ಮಠದಲ್ಲಿ ಹಮ್ಮಿಕೊಂಡಿ ರುವ ಆದಿ ಜಗದ್ಗುರು ಶ್ರೀ ಕೆಂಚವೀರೇಶ್ವರ ಮಹಾ ಶಿವಯೋಗಿಗಳವರ ಸಂಸ್ಮರಣೆ ಕುರಿತು ಚರ್ಚಿಸ ಲಾಗುವುದೆಂದು ಜಿಗಳಿಯ ಇಂದೂಧರ್ ತಿಳಿಸಿದ್ದಾರೆ.

# ಡಿಡಿಪಿಐ ಆಗಿ ಜಿ.ಆರ್. ತಿಪ್ಪೇಶಪ್ಪ ಅಧಿಕಾರ ಸ್ವೀಕಾರ



ದಾವಣಗೆರೆ, ನ.13- ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾಗಿ ಜಿ.ಆರ್. ತಿಪ್ಪೇಶಪ್ಪ ಅವರು ಅಧಿಕಾರ ಸ್ವೀಕರಿಸಿದ್ದಾರೆ. ತಿಪ್ಪೇಶಪ್ಪ ಅವರು ಚನ್ನಗಿರಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ, ದಾವಣಗೆರೆ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯಾಗಿ, ಚಿತ್ರದುರ್ಗ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ರೀಡರ್ ಆಗಿ ಸೇವೆ ಸಲ್ಲಿಸಿದ್ದಾರೆ.

# 25 ರಿಂದ ರಾಷ್ಟ್ರಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಟೂರ್ನಿ

ದಾವಣಗೆರೆ, ನ.13- ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘ ಹಾಗೂ ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಸಂಯುಕ್ತಾಶ್ರಯದಲ್ಲಿ 14ನೇ ಬಾರಿಗೆ ದಿ.ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿನೆನಪಿನ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಷ್ಟ್ರಮಟ್ಟದ ಹೊನಲು ಬೆಳಕಿನ ಲೀಗ್ ಕಂ ನಾಕೌಟ್ ಕ್ರಿಕೆಟ್ ಟೂರ್ನಿಯನ್ನು ಇದೇ ದಿನಾಂಕ 25 ರಿಂದ 28ರವರೆಗೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಅವರು, ಟೂರ್ನಿಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನ 3,55,555 ರೂ ಜೊತೆಗೆ ಶಾಮನೂರು ಡೈಮಂಡ್ ಕಪ್, ದ್ವಿತೀಯ ಬಹುಮಾನವಾಗಿ 2,55,555 ರೂ. ಹಾಗೂ ಶಿವಗಂಗಾ ಕಪ್ ಮತ್ತು ತೃತೀಯ ಬಹುಮಾನ ವಾಗಿ 1,25,555 ರೂ. ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ಉತ್ತಮ ಆಲ್‌ರೌಂಡರ್ ಗಳಿಗೆ ಹೀರೋ ಹೊಂಡಾ ಬೈಕ್ ನೀಡಲಾಗುವುದು ಎಂದರು.

ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ತುಮಕೂರು, ಶಿವಮೊಗ್ಗ, ಹುಬ್ಬಳ್ಳಿ ಸೇರಿ ದಂತೆ ಹೊರ ರಾಜ್ಯಗಳಾದ ಕೇರಳ, ಚೆನ್ನೈ, ಮಧ್ಯ ಪ್ರದೇಶ, ಮಹಾರಾಷ್ಟ್ರ ದಿಂದ ಒಟ್ಟು 24 ತಂಡಗಳು, 360 ಆಟಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ. ಟೂರ್ನಿಯ ಜೊತೆಗೆ ವಿಶೇಷವಾಗಿ 6 ಅಫಿಷಿಯಲ್ ಕಪ್ ಪಂದ್ಯಾವಳಿಯನ್ನೂ ನಡೆಸಲಾಗುತ್ತಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀನಿವಾಸ ಶಿವಗಂಗಾ, ಜಯಪ್ರಕಾಶ್, ಸುರೇಶ್ ಪಾಟೀಲ್, ಚಂದ್ರು, ಪ್ರಕಾಶ್, ಆಕಾಶ್, ಯುವರಾಜ್ ಹಾಗು ಇತರರು ಉಪಸ್ಥಿತರಿದ್ದರು.


REQUIRED

LIAISON EXECUTIVE (SSLC QUALIFIED); ELECTRICIAN (DIPLOMA HOLDER) AND HORTICULTURIST (PREFERABLY GRADUATE) TO WORK AT RANEBENNUR AREA.

CONTACT: 8431286626 6364862762 / 08049222216

ಬೇಕಾಗಿದೆ

ದಾವಣಗೆರೆಯಿಂದ ರಾಣೆಬೆನ್ನೂರಿನರವರೆಗೆ 10 ಕಿ.ಮೀ. ವ್ಯಾಪ್ತಿಯಲ್ಲಿ 10 ರಿಂದ 100 ಎಕರೆವರೆಗೆ ಕೆಂಪು ಮಣ್ಣು & ನೀರಿನ ಸೌಕರ್ಯವಿರುವ ಕೃಷಿ ಭೂಮಿ ಹಾಗೂ ಕೈಗಾರಿಕೆ ಉದ್ದೇಶಕ್ಕಾಗಿ ಭೂಮಿ ಬೇಕಾಗಿದೆ.

Mr. Vijaya Kumar 8431286626

Mr. Nagaraju C A 6364862762

Mr. Lingaraj 8453521357

JANATHA VIDYALAYA ENGLISH MEDIUM SCHOOL

Hondada Road, Davangere.

9108756914, 98446 64231, 96207 17196

TEACHER'S REQUIRED

| Class | Subjects | Post Available |
|---|---|---|
| III, IV, V | Kannada and Mathematics | 3 |
| I to V | Computer, Hindi Known DTP Work | 2 |
| VI, VII, VIII | Mathematics, Science | 2 |
| I to X | P.E. Teachers | 2 |
| LKG, UKG | English, EVS | 2 |
| LKG, UKG | Kannada, Mathematics | 3 |
| Play Group | English and Mathematics | 2 |





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte